ಸಂಪುಟ 01 | ಸಂಚಿಕೆ 154 | ಭಾನುವಾರ 26 ಏಪ್ರಿಲ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ, ಮಾನ್ವಿ, ಲಿಂಗಸೂಗೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ವಿಶ್ವ ಬೌದ್ಧಿಕ ಆಸ್ತಿ ದಿನ

ಪ್ರತಿ ವರ್ಷ ಏಪ್ರಿಲ್ 26 ರಂದು ಈ ದಿನವನ್ನು ಆಚ–ರಿಸಲಾಗುತ್ತದೆ ಮತ್ತು ಪೇಟೆಂಟ್‌ಗಳು, ಹಕ್ಕುಸ್ವಾಮ್ಯ, ಟ್ರೇಡ್‌ಮಾರ್ಕ್‌ಗಳು ಮತ್ತು ವಿನ್ಯಾಸಗಳು ದೈನಂದಿನ ಜೀವನದ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದರ ಕುರಿತು ಜಾಗೃತಿ ಮೂಡಿಸಲು 2000 ರಲ್ಲಿ ವಿಶ್ವ ಬೌದ್ಧಿಕ ಆಸ್ತಿ ಸಂಸ್ಥೆ (ಘಳಕಔ) ಇದನ್ನು ಸ್ಥಾಪಿಸಿತು. ಮತ್ತು ನಾವೀನ್ಯತೆ ಮತ್ತು ಸೃಜನಶೀಲತೆಯನ್ನು ಪ್ರೋತ್ಸಾಹಿಸುವಲ್ಲಿ ಬೌದ್ಧಿಕ ಆಸ್ತಿ ಹಕ್ಕುಗಳು ವಹಿಸುವ ಪ್ರಮುಖ ಪಾತ್ರವೂ ಇದಾಗಿದೆ.

## ಸುಭಾಷಿತ

ಅದೃಷ್ಟ ವೆನ್ನುವುದು ಪ್ರಯತ್ನವೆಂಬ ತಾಯಿಗೆ , ಅವಕಾಶವೆಂಬ ತಂದೆಗೆ ಜನಿಸುವ ಮಗು.

ಗುರುನಾನಕ್.

# ಉದ್ಯೋಗ ಮೀಸಲಾತಿ ಅಡೆತಡೆ ನಿವಾರಣೆ

## 56,000 ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಲು ಸರ್ಕಾರ ಸಜ್ಜು



ಬೆಂಗಳೂರು: ಅನುಸೂಚಿತ ಜಾತಿಗಳಿಗೆ (SCs) 15 ಶೇಕಡಾ ಆಂತರಿಕ ಮೀಸಲಾತಿ ಜಾರಿಗೆ ತರಲು ಸರ್ಕಾರ ಕೈಗೊಂಡ ತೀರ್ಮಾನದೊಂದಿಗೆ, 56,432 ಇಲಾಖಾ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ಪ್ರಮುಖ ಅಡೆತಡೆಯನ್ನು ಶುಕ್ರವಾರ ಸರ್ಕಾರ ದಾಟಿದೆ. ನೇಮಕಾತಿಯಲ್ಲಿ ವಿಳಂಬವಾಗಿರುವುದಕ್ಕೆ ವಿರೋಧವಾಗಿ ಕೆಲವು ಸಮಯ ಹಿಂದೆ ಧಾರವಾಡದಲ್ಲಿ ಪ್ರತಿಭಟನೆ ನಡೆಸಿದ ಯುವಕರಿಗೆ ಇದು ಆಶಾಕಿರಣವಾಗಿದೆ.

ಖಾಸಗಿ ವಲಯದಲ್ಲಿ ಕೃತಕ ಬುದ್ಧಿಮತ್ತೆ (AI) ಸೇರಿದಂತೆ ವಿವಿಧ ಕಾರಣಗಳಿಂದ ಉದ್ಯೋಗ ಅವಕಾಶಗಳು ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ, ವಿಶೇಷವಾಗಿ ಗ್ರಾಮೀಣ ಪ್ರದೇಶದ ಯುವಕರು ಸುರಕ್ಷಿತ ಸರ್ಕಾರಿ ಉದ್ಯೋಗಗಳತ್ತ ಮುಖ ಮಾಡಿದ್ದಾರೆ. ಇದೇ ಸಮಯದಲ್ಲಿ ಸರ್ಕಾರ ಮೀಸಲಾತಿ ಗೊಂದಲದಲ್ಲಿ ಸಿಲುಕಿತ್ತು. ಬಜೆಟ್‌ನಲ್ಲಿ ಘೋಷಿಸಿದಂತೆ, ನಾವು ತಕ್ಷಣವೇ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸುತ್ತಿದ್ದೇವೆ. 6 ಶೇಕಡಾ ಹುದ್ದೆಗಳನ್ನು ಬ್ಯಾಕ್‌ಲಾಗ್ ಆಗಿ ಉಳಿಸಿಕೊಂಡು, ನಾಳೆಯೇ ಅಧಿಸೂಚನೆ ಹೊರಡಿಸುತ್ತೇವೆ ಎಂದು ಸಚಿವ ಸಂಪುಟ ಸಭೆಯ ನಂತರ ಸಿದ್ದರಾಮಯ್ಯ ನಿನ್ನೆ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದ್ದರು.

ಮುಂದಿನ ಕೆಲವು ವರ್ಷಗಳಲ್ಲಿ ಹಂತ ಹಂತವಾಗಿ ಎಲ್ಲಾ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದು ಅವರು ಹೇಳಿದರು. ಕೋರ್ಟ್ ಆದೇಶದ ಪ್ರಕಾರ SC/ST/OBCಗಳ ಒಟ್ಟು ಮೀಸಲಾತಿ 50 ಶೇಕಡಾ ಮೀರಬಾರದು ಎಂಬುದರಿಂದ, 15 ಶೇಕಡಾ ಎಸ್ ಸಿ ಮೀಸಲಾತಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಕ್ರಿಯೆ ಶೀಘ್ರದಲ್ಲೇ ಆರಂಭವಾಗಲಿದೆ ಮತ್ತು ಅಧಿಸೂಚನೆ ಹೊರಡಿಸಲಾಗುವುದು ಎಂದು ಅವರು ಹೇಳಿದರು. ಹೈಕೋರ್ಟ್ ಅಂತಿಮ ತೀರ್ಪು ನೀಡುವವರೆಗೆ ನೇಮಕಾತಿ 50 ಶೇಕಡಾ ಮೀಸಲಾತಿಯೊಳಗೆ ನಡೆಯಲಿದೆ. ನಮ್ಮ ಸರ್ಕಾರ 56 ಶೇಕಡಾ ಮೀಸಲಾತಿ ನೀಡುವ ಬದ್ಧತೆಯನ್ನು ಹೊಂದಿದೆ ಎಂದು ಹೇಳಿದರು.

ಪರಿಶಿಷ್ಟ ಜಾತಿಗಳಿಗೆ 15ರಿಂದ 17 ಶೇಕಡಾಕ್ಕೆ 2 ಶೇಕಡಾ ಹೆಚ್ಚಳ ಹಾಗೂ ಎಸ್ ಟಿಗಳಿಗೆ 3ರಿಂದ 7 ಶೇಕಡಾಕ್ಕೆ 4 ಶೇಕಡಾ ಹೆಚ್ಚಳವನ್ನು ತಾತ್ಕಾಲಿಕವಾಗಿ 6 ಶೇಕಡಾ ಬ್ಯಾಕ್‌ಲಾಗ್ ಎಂದು ಪರಿಗಣಿಸಲಾಗುವುದು ಎಂದರು. ನ್ಯಾಯಾಲಯದ ತೀರ್ಪು ಸರ್ಕಾರದ ಪರವಾಗಿ ಬಂದರೆ, ಎಸ್ ಸಿ ವರ್ಗದವರಿಗೆ 17 ಶೇಕಡಾ ಮತ್ತು ಎಸ್ ಟಿ ವರ್ಗದವರಿಗೆ 7 ಶೇಕಡಾ ಸೇರಿ ಒಟ್ಟು 24 ಶೇಕಡಾ ಮೀಸಲಾತಿ ನೀಡುವಲ್ಲಿ ಸರ್ಕಾರ ಬದ್ಧವಾಗಿದೆ. ಆವರೆಗೆ, ಸಚಿವ ಸಂಪುಟದಲ್ಲಿ ಮೊದಲು ತೀರ್ಮಾನಿಸಿದ 6:6:5 ಆಂತರಿಕ ಮೀಸಲಾತಿ ಅನುಪಾತದ ಪ್ರಕಾರ 6 ಶೇಕಡಾವನ್ನು ಬ್ಯಾಕ್‌ಲಾಗ್ ಆಗಿ ಇಡಲಾಗುತ್ತದೆ ಎಂದು ಭರವಸೆ ನೀಡಿದರು. ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ಅಧ್ಯಕ್ಷತೆಯಲ್ಲಿ ಏಕಸದಸ್ಯ ಆಯೋಗ ರಚಿಸಲಾಗಿದ್ದು, ಅವರು ಆಂತರಿಕ ಮೀಸಲಾತಿ ನೀಡುವಂತೆ ಶಿಫಾರಸು ಮಾಡಿದ್ದರು. ಅದರಂತೆ ಎಸ್ ಸಿ ಎಡ, ಎಸ್ ಸಿ ಬಲ ಮತ್ತು ಭೋವಿ, ಲಂಬಾಣಿ, ಕೊರಚ, ಕೊರಮ ಹಾಗೂ ಇತರ ವಲಸೆ ಜಾತಿಗಳಿಗೆ ಕ್ರಮವಾಗಿ 6:6:5 ಅನುಪಾತದಲ್ಲಿ ಆಂತ–ರಿಕ ಮೀಸಲಾತಿ ನೀಡಲು ಸರ್ಕಾರ ತೀರ್ಮಾನಿಸಿತು.

ಇದರಿಂದ ಪರಿಶಿಷ್ಟ ಜಾತಿಗಳಿಗೆ 17 ಶೇಕಡಾ ಮತ್ತು ಎಸ್ ಟಿಗಳಿಗೆ 7 ಶೇಕಡಾ ಸೇರಿ ಒಟ್ಟು 24 ಶೇಕಡಾ ಮೀಸಲಾತಿ ನೀಡಲಾಗಿದೆ. ಒಟ್ಟಾರೆ 56 ಶೇಕಡಾ ಮೀಸಲಾತಿ ನೀಡಲಾಗಿದೆ ಎಂದು ಅವರು ವಿವರಿಸಿದರು. ಆದರೆ, ಇಂಡ್ರಾ ಸಾವ್ನೀ ವಿರುದ್ಧ ಯೂನಿಯನ್ ಆಫ್ ಇಂಡಿಯಾ (1992) ಪ್ರಕರಣವನ್ನು ಉಲ್ಲೇಖಿಸಿ, ಒಟ್ಟು ಮೀಸಲಾತಿ 50 ಶೇಕಡಾ ಮೀರಬಾರದು ಎಂದು ನ್ಯಾಯಾಲಯ ಪುನರುಚ್ಚರಿಸಿದೆ ಎಂದು ಅವರು ಹೇಳಿದರು.

## ಅರಕೇರಾ ಪಟ್ಟಣದ ಅರುಣಕುಮಾರ ಕಬ್ಬೇರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ

ನೈಜ್ಯ ದೆಸೆ ನ್ಯೂಸ್

ಅರಕೇರಾ: ಪಟ್ಟಣದ ವಿದ್ಯಾರ್ಥಿ ಅರುಣಕುಮಾರ ತಂದೆ ಹನುಮಂತ್ರಾಯ ಕಬ್ಬೇರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಆಂಗ್ಲ ಭಾಷೆ ವಿಭಾಗದಲ್ಲಿ 625 ಅಂಕಗಳಿಗೆ 604 ಅಂಕ (ಶೇ.96.64%) ಪಡೆಯುವ ಮೂಲಕ ಸಾಧನೆ ಮಾಡಿದ್ದಾನೆ.



ಈ ವಿದ್ಯಾರ್ಥಿಯು ಲಿಂಗಸೂಗೂರು ತಾಲೂಕಿನ ದೇವರಬೂಪೂರು ಗ್ರಾಮದಲ್ಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮುರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ವ್ಯಾಸಂಗ ಮಾಡಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಅಂಕಪಡೆದಿರುತ್ತಾನೆ. ಕನ್ನಡ 625 ಇಂಗ್ಲೀಷ 96 ಹಿಂದಿ 100 ಸೇರಿದಂತೆ ಒಟ್ಟು 625ಕ್ಕೆ 604 ಅಂಕಗಳಿಸಿ ತಂದೆ ತಾಯಿಗಳಿಗೆ ಮತ್ತು ಪಟ್ಟಣಕ್ಕೆ ಕೀರ್ತಿತಂದುಕೊಟ್ಟಿದ್ದಾನೆ.ವಿದ್ಯಾರ್ಥಿಗಳ ಸಾಧನೆಗೆ ಪಟ್ಟಣದಲ್ಲಿನ ಶಿಕ್ಷಣ ಪ್ರೇಮಿಗಳು ಅಭಿನಂದಿಸಿದ್ದಾರೆ.

## ಜಾಲಹಳ್ಳಿಯ ಮುರಾರ್ಜಿ ವಸತಿ ಶಾಲೆಯ ವಿದ್ಯಾರ್ಥಿ ಮಲ್ಲಿಕಾರ್ಜುನ ಸ್ವಾಮಿಗೆ ಭರ್ಜರಿ ಸನ್ಮಾನ



ನೈಜ್ಯ ದೆಸೆ ನ್ಯೂಸ್

ರಾಯಚೂರು: ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದ ಮುರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿ ಮಲ್ಲಿಕಾರ್ಜುನ ಸ್ವಾಮಿ ಅವರು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ನಾಲ್ಕನೇ (Rank) ರ್ಯಾಂಕ್ ಪಡೆದು ಗ್ರಾಮಕ್ಕೆ ಅಪಾರ ಹೆಮ್ಮೆ ತಂದಿದ್ದಾರೆ.

ಈ ಅಪೂರ್ವ ಸಾಧನೆ ಹಿನ್ನೆಲೆಯಲ್ಲಿ, ಶಾಲೆಯ ಶಿಕ್ಷಕರ ತಂಡವು ಪ್ರಾಂಶುಪಾಲರಾದ ಸೋಮಶೇಖರಗೌಡ ಅವರ ನೇತೃತ್ವದಲ್ಲಿ ವಿದ್ಯಾರ್ಥಿಯ ಸ್ವಂತ ಊರಾದ *ಮಲ್ಲಟ (ತಾ. ಸಿರವಾರ, ಜಿ. ರಾಯಚೂರು)*ದಲ್ಲಿರುವ ಅವರ ನಿವಾಸಕ್ಕೆ ಭೇಟಿ ನೀಡಿ, ಮಲ್ಲಿಕಾರ್ಜುನ ಸ್ವಾಮಿ ಹಾಗೂ ಅವರ ಪೋಷಕರಾದ ಸಿದ್ದರಾಮಯ್ಯ ಸ್ವಾಮಿ ಅವ–ರಿಗೆ ಗೌರವಪೂರ್ವಕವಾಗಿ ಸನ್ಮಾನ ಮಾಡಿದರು. ಅವರ ಮನೆ ಶ್ರೀ ಬ್ರಹ್ಮರಂಬ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ಸಮೀಪದಲ್ಲಿದೆ.

ಈ ಸಂದರ್ಭದಲ್ಲಿ ಪ್ರಾಂಶುಪಾಲರು ಸೋಮಶೇಖರಗೌಡ, ಪಿ.ಟಿ. ಶಿಕ್ಷಕರು ಶರಣಗೌಡ, ವಾರ್ಡನ್: ಅಮರೇಶ್, ಎಫ್‌ಡಿಎ ಮಾಳಪ್ಪ ಮತ್ತು ಪೋಷಕರು ಸಿದ್ದರಾಮಯ್ಯ ಸ್ವಾಮಿ, ಮಲ್ಲಪ್ಪ ಬಿ (ಸಾಕೀನ್: ಹೊಸೂರು) ಸೇರಿದಂತೆ ಅನೇಕರು ಉಪಸ್ಥಿತ–ರಿದ್ದರು, ಇದೇ ವೇಳೆ ಗ್ರಾಮಸ್ಥರು ಹಾಗೂ ಪಾಲಕರು ಸೇರಿ ಪ್ರಾಂಶುಪಾಲರು ಮತ್ತು ಶಿಕ್ಷಕರನ್ನೂ ಸನ್ಮಾನಿಸಿ ಗೌರವ ಸಲ್ಲಿಸಿದರು. ಈ ಸಾಧನೆ ಜಾಲಹಳ್ಳಿ ಗ್ರಾಮಕ್ಕೂ ಹಾಗೂ ಶಾಲೆಗೊ? ಹೆಮ್ಮೆಯ ವಿಷಯವಾಗಿದ್ದು, ಇತರೆ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದೆ.

## ಅಗ್ಗಿ ಮಹೋತ್ಸವ–ಸಾಮೂಹಿಕ ವಿವಾಹ–ಡಾ.ಯತೀಂದ್ರ–ಸುರೇಶ ಭೈರತಿ ಭಾಗಿ–ಯಶಸ್ವಿಗೆ ಸಹಕರಿಸಿ

ನೈಜ್ಯ ದೆಸೆ ನ್ಯೂಸ್



ಕವಿತಾಳ: ಪಟ್ಟಣ ಸಮೀಪದ ಪಾತಾಪೂರ ಗ್ರಾಮದಲ್ಲಿ ದಿನಾಂಕ ಏ.20 ರಿಂದ 28 ರ ವರೆಗೆ ನಡೆಯುವ ಗ್ರಾಮದ ಆರಾಧ್ಯ ದೈವ ಬಾಡದಲಿಂಗೇಶ್ವರ ಹಾಗೂ ಶ್ರೀ ಕರಿಲಿಂಗೇಶ್ವರ ದೇವರ ಅಗ್ಗಿ ಮಹೋತ್ಸವ ಹಾಗೂ ಸಾಮೂಹಿಕ ವಿವಾಹಗಳು ಸೇರಿ ನಾನಾ ಧಾರ್ಮಿಕ ಕಾರ್ಯಕ್ರಮಗಳು ನೇರವೇರಲಿವೆ.

ದಿನಾಂಕ 29 ರಂದು ರವಿವಾರ ಬೆಳಿಗ್ಗೆ ಅಗ್ಗಿ ಮಹೋತ್ಸವ ನಡೆಯಲಿದ್ದು ಬಳಿಕ ಸಾಮೂಹಿಕ ವಿವಾಹ ನಡೆಯಲಿವೆ, ಈ ಕಾರ್ಯಕ್ರಮದಲ್ಲಿ ಮುಖ್ಯವಾಗಿ ಡಾ.ಯತೀಂದ್ರ ಸಿದ್ಧರಾಮಯ್ಯ ಹಾಗೂ ಸಚಿವ ಸುರೇಶ ಭೈರತಿ ಹಾಗೂ ಸಚಿವ ಎನ್.ಎಸ್.ಬೋಸರಾಜು, ಶಾಸಕ ಹಂಪಯ್ಯ ನಾಯಕ ಸೇರಿದಂತೆ ನಾನಾ ಮಠಾದೀಶರು, ಪೂಜ್ಯರು, ಸಮಾಜದ ಪೂಜಾರಿಗಳು ಸೇರಿ ನಾಯಕರು, ಮುಖಂಡರು ಭಾಗವಹಿಸಲಿದ್ದು ಆದ–ರಿಂದ ಹಾಲುಮತ ಸಮಾಜ ಸೇರಿ ಪ್ರತಿಯೊಂದು ಸಮಾಜದ ಪ್ರತಿಯೊಬ್ಬರು ಕಾರ್ಯಕ್ರಮದಲ್ಲಿ ಭಾಗವಹಿಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಹಾಲುಮತ ಮಹಾಸಭಾದ ಜಿಲ್ಲಾಧ್ಯಕ್ಷ ಹಾಗೂ ಸಿಂಡಿಕೇಟ್ ಸದಸ್ಯ ಶಿವಣ್ಣ ವಕೀಲರು ಹಾಗೂ ಜಿ.ಪಂ.ಮಾಜಿ ಸದಸ್ಯ ಮಾಳಪ್ಪ ತೋಳ, ಜಡೆ ಕರಿಯಪ್ಪ ತಾತಾ, ಶಿವಣ್ಣ ತಾತಾ ಹಣಿಗಿ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದ್ದಾರೆ.

## ಕೊಟ್ಟೂರು:ಗುರುದೇವ ಆಂಗ್ಲ ಮಾಧ್ಯಮ ಪ್ರೌಢಶಾಲೆ 12 ವಿದ್ಯಾರ್ಥಿಗಳು ಟಾಪರ್ಸ್

ನೈಜ್ಯ ದೆಸೆ ನ್ಯೂಸ್




ವಿಜಯನಗರ ಜಿಲ್ಲೆಯ ಕೊಟ್ಟೂರು ಪಟ್ಟಣದ ಗುರುದೇವ ಆಂಗ್ಲ ಮಾಧ್ಯಮ ಪ್ರೌಢ ಶಾಲೆ ವಿದ್ಯಾರ್ಥಿಗಳು ಎಸ್.ಎಸ್. ಎಲ್. ಸಿ ಯಲ್ಲಿ ತಾಲೂಕು ಮಟ್ಟದಲ್ಲಿ ಅತ್ಯಂತಮ ಗ್ರೇಡ್ ಶ್ರೇಣಿಯಲ್ಲಿ ತೇರ್ಗಡೆ ಹೊಂದುವ ಮೂಲಕ ಸಾಧನೆ ತೋರಿದ್ದಾರೆ.

ಪ್ರತಿ ವರ್ಷದ ಫಲಿತಾಂಶದಲ್ಲಿ ಗುರುದೇವ ಆಂಗ್ಲ ಮಾಧ್ಯಮ ಪ್ರೌಢಶಾಲೆ ತಾಲೂಕು ಮಟ್ಟದಲ್ಲಿ ಗಮನ ಸೆಳೆದಿರುವಂತೆ ಈ ಬಾರಿಯೂ 12 ವಿದ್ಯಾರ್ಥಿಗಳು ಟಾಪರ್ ಆಗಿದ್ದಾರೆ. ಶಾಲೆಯ ಟಿ.ಜಿ.ಪ್ರೀತಮ್ 625 ಅಂಕಗಳಿಗೆ 619 ಅಂಕಗಳನ್ನು ಗಳಿಸಿ ತಾಲೂಕಿನ ಎರಡನೇ ಟಾಪರ್ ಆಗಿಗಮನ ಸೆಳೆದಿದ್ದರೆ.

ವಿದ್ಯಾರ್ಥಿಗಳ ಸಾಧನೆಗೆ ಮುಖ್ಯೋಪಾಧ್ಯಾಯ ಪ್ರಕಾಶ್ ಕೋಡಳ್ಳಿ. ಮಾರುತಿ. ಮುಬಿನ. ಶಾಲೆಯ ಆಡಳಿತ ಮಂಡಳಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಕಟ್‌ಲೆಟ್‌ಕೂರು ಗ್ರಾಮದಲ್ಲಿ ಆರೋಗ್ಯ ಇಲಾಖೆಯಿಂದ ರಾತ್ರಿ ವೇಳೆ ರಕ್ತಲೇಪನ

### ಕ್ಯುಲೇಕ್ಸ್ ಸೊಳ್ಳೆಯ ಕಚ್ಚುವಿಕೆಯಿಂದ ಹರಡುವ ಆನೆಕಾಲು ರೋಗವನ್ನು ನಿಯಂತ್ರಿಸಲು ರಾತ್ರಿ ವೇಳೆಯ ರಕ್ತಲೇಪನ ಮಾಡಿಸಿ:.

ನೈಜ್ಯ ದೆಸೆ ನ್ಯೂಸ್



ಸೋಂಕಿತ ಕ್ಯುಲೇಕ್ಸ್ ಸೊಳ್ಳೆಯ ಕಚ್ಚುವಿಕೆಯಿಂದ ಹರಡುವ ಹಾಗೂ ಒಮ್ಮೆ ಬಂದರೆ ಜೀವನ ಪರ್ಯಂತ ಕಾಡುವ ಆನೆಕಾಲು ರೋಗವನ್ನು ಆರಂಭದಲ್ಲಿಯೇ ತಡೆಗಟ್ಟಲು ರಾತ್ರಿ ವೇಳೆ ಆರೋಗ್ಯ ಇಲಾಖೆಯಿಂದ ಕೈಗೊಳ್ಳುವ ರಕ್ತಲೇಪನ ಕಾರ್ಯಕ್ಕೆ ಜನತೆ ಸಹಕರಿಸಿ ಎಂದು ಚಂದ್ರಬಂಡಾ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ ಶ್ರೀನಿವಾಸ ಕುಲಕರ್ಣಿ ಕೋರಿದರು.

ರಾಯಚೂರು ತಾಲೂಕಿನ ಚಂದ್ರಬಂಡಾ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಕಡ್ಗಮದೊಡ್ಡಿಯ ನಾಲ್ಕು ಇಟ್ಟಿಗೆ ಬಟ್ಟಿಗಳ ವಲಸೆ ಕಾರ್ಮಿಕರಿಗೆ ಮೊದಲೇ ಮಾಹಿತಿ ನೀಡಿ ರಾತ್ರಿ ವೇಳೆ ಹಮ್ಮಿಕೊಂಡ ರಕ್ತಲೇಪನ ಕಾರ್ಯದ ಕುರಿತು ಮಾತನಾಡಿ, ಹಲವು ವಿಧದ ಸೊಳ್ಳೆಗಳು ಸಮುದಾಯದಲ್ಲಿ ನಮ್ಮೊಂದಿಗೆ ಇದ್ದು ಅದರಲ್ಲಿ ಕ್ಯೂಲೆಕ್ಸ್ ಸೊಳ್ಳೆ, ಆನೆಕಾಲು ರೋಗ ಹೊಂದಿದ ವ್ಯಕ್ತಿಗೆ ಕಚ್ಚಿ ಅದೆ ಸೊಳ್ಳೆ ಇನ್ನೊಬ್ಬರಿಗೆ ಕಚ್ಚಿದಾಗ ಬರಿಗಣ್ಣಿಗೆ ಕಾಣದ 'ವುಚೆರೇರಿಯಾ ಬ್ಯಾಂಕ್ರೋಫ್ಟಿ' 'ಬ್ರೂಗಿಯಾ ಮಲಾಯಿ' ಎಂಬ ಪರಾವಲಂಬಿ ನೂಲಿನಂತಹ ಹುಳುಗಳನ್ನು ಅವರ ದೇಹಕ್ಕೆ ವರ್ಗಾಯಿಸುತ್ತವೆ. ಈ ಹುಳುಗಳು ರಕ್ತ ಮತ್ತು ದುಗ್ಧರಸನಾಳಗಳಲ್ಲಿ ಬೆಳೆದು, ದ್ರವ ಹರಿಯದಂತೆ ತಡೆಯುತ್ತವೆ, ಇದರಿಂದ ಕೈ ಕಾಲುಗಳು ಆನೆಯ ಕಾಲಿನಂತೆ ದಪ್ಪವಾಗುವ ಮೂಲಕ ಶಾಶ್ವತವಾಗಿ ಆನೆಕಾಲು ರೋಗಕ್ಕೆ ಕಾರಣವಾಗುತ್ತಿದ್ದು, ಜಿಲ್ಲೆಯಲ್ಲಿ ರೋಗ ತಡೆಗಾಗಿ ಹಾಗೂ ಆರಂಭದಲ್ಲಿಯೇ ಗುರ್ತಿಸಲು ಮೇಲಾಧಿಕಾರಿಗಳ ನಿರ್ದೇಶನದಂತೆ ಆಯ್ದ ಸ್ಥಳಗಳಲ್ಲಿ ರಾತ್ರಿ ವೇಳೆ ರಕ್ತ ಲೇಪನ ಕಾರ್ಯ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಅಲ್ಲದೆ ಸಾಮಾನ್ಯವಾಗಿ ಆನೆಕಾಲು ರೋಗ ವ್ಯಕ್ತಿಯಲ್ಲಿ ಕಂಡುಬರಲು ಧಿರ್ಘಾವಧಿ ತೆಗೆದುಕೊಳ್ಳುತ್ತದೆ.

ಆರಂಭದ ಲಕ್ಷಣಗಳು: ಆರಂಭದಲ್ಲಿ ಜ್ವರ ಮತ್ತು ಚಳಿ, ಚರ್ಮದ ಮೇಲೆ ಸೋಂಕು ಹಾಗೂ ಕಾಲುಗಳು, ತೋಳುಗಳು, ಸ್ತನಗಳು ಅಥವಾ ಜನನಾಂಗದ ಭಾಗಗಳಲ್ಲಿ ಊತ ಕಂಡುಬರುತ್ತದೆ. ಕ್ರಮೇಣ ಚರ್ಮವು ದಪ್ಪವಾಗಿ, ಗಟ್ಟಿಯಾಗಿ, ಗರುಸಾಗಿ ಆನೆ ಚರ್ಮದಂತೆ ಕಾಣಿಸುವುದು. ಇದರಿಂದ ಅತಿಯಾದ ನೋವು ಮತ್ತು ನಡೆಯಲು ಕಷ್ಟವಾಗುವುದು. ಇದನ್ನು ರೋಗ ಲಕ್ಷಣಗಳನುಸಾರ ನಿರ್ವಹಣೆ ಚಿಕಿತ್ಸೆ ಮಾತ್ರ ಸಾಧ್ಯವಿದ್ದು, ಸಂಪೂರ್ಣ ಗುಣಪಡಿಸಲು ಕಷ್ಟಕರವಾಗಿದೆ.

ಮುಂಜಾಗೃತೆ ಕ್ರಮಗಳು: ಈ ಹಿನ್ನಲೆ ಮನೆಯ ಸುತ್ತಲು ಚರಂಡಿ, ತಿಪ್ಪೆಗಳ ಹತ್ತಿರ ಅನುಪಯುಕ್ತ ನೀರು ನಿಲ್ಲದಂತೆ ಹಾಗೂ ಮನೆ ಹೊಲ, ಗದ್ದೆಗಳಲ್ಲಿ ಕೆಲಸ ಮಾಡುವಾಗ ಸೊಳ್ಳೆಯಿಂದ ಕಚ್ಚಿಸಿಕೊಳ್ಳದಂತೆ ಜಾಗೃತಿ ವಹಿಸಲು ವಿನಂತಿಸಿದರು. ಈ ಸಂಧರ್ಭದಲ್ಲಿ ಆರೋಗ್ಯ ನಿರಿಕ್ಷಣಾಧಿಕಾರಿ ಟಿ. ವಿಜಯಕುಮಾರ, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಧನಲಕ್ಷ್ಮೀ, ಸಿಹೆಚ್‌ಓ ಕ್ರಾಂತಿ, ಆಶಾ ಕಾರ್ಯಕರ್ತೆ ಉಮಾದೇವಿ, ಪುಷ್ಪಾವತಿ, ರಣೆಯಮ್ಮ ಒಳಗೊಂಡ ತಂಡವು 121 ಜನರಿಗೆ ಪೈಲೇರಿಯಾ, 102 ಜನರಿಗೆ ಮಲೇರಿಯಾ ರಕ್ತಲೆರಪನ ಕೈಗೊಂಡರು.

## ಸಾಹಿತ್ಯ ಸಿಂಚನ

"ಅಕ್ಷರದ ದೀಪ"

ಅಕ್ಷರ ಕಲಿತ ಕೈಗೆ ಶಕ್ತಿ ಬಂತು
ಅನಕ್ಷರತೆಯ ಕತ್ತಲು ದೂರ ಓಡಿತು
ಶಿಕ್ಷಣ ಅಂದ್ರೆ ಬರೀ ಅಂಕಪಟ್ಟಿ ಅಲ್ಲ
ಬದುಕನ್ನ ಓದೋ ಕಣ್ಣು

ಸ್ಲೇಟ್–ಬಳಪದಿಂದ ಶುರುವಾದ ಪಯಣ
ಇವತ್ತು ಚಂದ್ರನ ಮೇಲೆ ಹೆಜ್ಜೆ ಇಡಿಸಿದೆ ತಮ್ಮ

ಶಾಲೆಯ ಬೆಂಚ್ ಕಲಿಸಿದ್ದು ಪಾಠ ಮಾತ್ರ ಅಲ್ಲ
ಸ್ನೇಹ, ಸೋಲು, ಗೆಲುವು ಎಲ್ಲದರ ಮೊದಲ ಪಾಠ ಅಲ್ಲಿ

ಬಡವ–ಶ್ರೀಮಂತ ಅಂತರ ಅಳಿಸೋ ಉಳಿ
ಶಿಕ್ಷಣ ಒಂದೇ ... ಅದೇ ನಿಜವಾದ ದುಡ್ಡು

ಪುಸ್ತಕದ ಹಾಳೆ ಹರಿದರೂ ಪರವಾಗಿಲ್ಲ
ತಲೆಯಲ್ಲಿ ಮೂಡಿದ ಜ್ಞಾನ ಹರಿಯೋದಿಲ್ಲ

ಟೀಚರ್ ಬೈದಾಗ ಕಣ್ಣೀರು ಬಂದಿದ್ರೂ
ಇವತ್ತು ಅವರೇ ನನ್ನ ಕಣ್ಣಿನ ಬೆಳಕು...

ಡಿಗ್ರಿ ಸರ್ಟಿಫಿಕೇಟ್ ಕೈಗೆ ಸಿಕ್ಕಿದ್ರೂ
ಕಲಿಯೋದು ನಿಂತರೆ ಬದುಕು ನಿಂತಂಗೆ

ಮೊಬೈಲ್, ಗೂಗಲ್ ಬಂದ್ರೂ ಮರಿಬೇಡ
ಗುರು ಹೇಳಿಕೊಟ್ಟ ನೀತಿಯೇ ನಿಜವಾದ ಸರ್ಚ್ ಇಂಜಿನ್

ಎಲ್ಲಾ ಸಂಪತ್ತು ಕಳೆದರೂ ಮತ್ತೆ ಸಂಪಾದಿಸಬಹುದು
ಆದ್ರೆ ಶಿಕ್ಷಣ ಒಂದ್ಸಲ ಸಿಕ್ರೆ ಯಾರೂ ಕದಿಯೋಕೆ ಆಗಲ್ಲ
ಜಾಣ

ಎಸ್. ದುರಗಪ್ಪ. ಕುಷ್ಟಗಿ.

# ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಬದ್ಧ: ಶಾಸಕ ರಾಜುಗೌಡ

ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಮತಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಸಾಕಷ್ಟು ಅನುದಾನ ತಂದು ಕೆಲಸ ಮಾಡುತ್ತಿದ್ದೇನೆ ಇದಕ್ಕೆ ನಿಮ್ಮೆಲ್ಲರ ಸಹಕಾರವೇ ಕಾರಣವಾಗಿದೆ ಎಂದು ದೇವರ ಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ (ಕು.ಸಾಲವಾಡಗಿ)ಹೇಳಿದರು. ಶನಿವಾರ ಮತಕ್ಷೇತ್ರದ ಚಬನೂರ ಗ್ರಾಮದಲ್ಲಿ ಜಿ.ಪಂ.ವಿ–ಜಯಪುರ, ಪಂಚಾಯತ ರಾಜ್ ಇಂಜಿನಿಯ–ರಿಂಗ್ ವಿಭಾಗ ವಿಜಯಪುರ ಇದರ ಸನ್ 2025–26 ನೇ ಸಾಲಿನ ಲೆಕ್ಕ ಶಿರ್ಷಿಕೆ 5054 ಯೋಜನೆ ಅಡಿ ರೂ.10.55 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಭೂಮಿ ಪೂಜೆ ಹಾಗೂ ಅಂಗನವಾಡಿ ನೂತನ ಕಟ್ಟಡಗಳ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಚಬನೂರ ಗ್ರಾಮ ಇಡೀ ಮತ ಕ್ಷೇತ್ರದಲ್ಲಿಯೇ ಒಂದು ಹೈಟೆಕ್ ಮಾದರಿಯ ಗ್ರಾಮ ಆಗಲಿದೆ ಇದರ ಕೀರ್ತಿ ಮುಖಂಡರಾದ ರುದ್ರಗೌಡ ಪಾಟೀಲ ಅವರಿಗೆ ಸಲ್ಲುತ್ತದೆ ಏಕೆಂದರೆ



ಅವರು ಸ್ವತಃ ಕಷ್ಟಪಟ್ಟು ಈ ಅನುದಾನವನ್ನು ತಂದಿದ್ದಾರೆ ಅವರಿಗೆ ನಾನು ಅಭಿನಂದಿಸುತ್ತೇನೆ. ಕ್ಷೇತ್ರದ ಅಭಿವೃದ್ಧಿಗೆ ಯಾರೇ ಪ್ರಯತ್ನ ಪಟ್ಟು ನನ್ನೊಂದಿಗೆ ಸಹಕರಿಸಿದರೆ ಅದನ್ನು ನಾನು ಸ್ವಾಗತಿಸುತ್ತೇನೆ ಅಭಿವೃದ್ಧಿ ವಿಷಯದಲ್ಲಿ ನನಗೆ ರಾಜಕಾರಣ ಬೇಕಾಗಿಲ್ಲ. ಚಬನೂರು ನನ್ನ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಗ್ರಾಮವಾಗಿದೆ ಮುಂದೆಯೂ ನಿಮ್ಮ ಸಹಕಾರ ಇದೇ ರೀತಿಯಾಗಿರಲಿ, ನಿಮ್ಮ ಋಣ ತೀರಿಸುವ ಹಾಗೆ ನಾನು ಕೆಲಸ ಮಾಡುತ್ತೇನೆ ಎಂದರು.

ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಚಬನೂರ ಶ್ರೀ ರಾಮಲಿಂಗೇಶ್ವರ ಮಠದ ಪೂಜ್ಯ ಶ್ರೀರಾಮಲಿಂಗಯ್ಯ ಮಹಾಸ್ವಾಮಿಗಳು ಗ್ರಾಮದ ಅಭಿವೃದ್ಧಿ ಕುರಿತು ಅಪಾರ ಕಾಳಜಿ ಹೊಂದಿರುವ ಮುಖಂಡ ರುದ್ರಗೌಡರು ಶಾಸಕ ರಾಜುಗೌಡರ ಸಹಕಾರದೊಂದಿಗೆ ಅನುದಾನ ತಂದು ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿರುವುದು ಸಂತೋಷದ ವಿಷಯವಾಗಿದೆ. ಸಾಸನೂರ ಗ್ರಾ.ಪಂ. ಪಿಡಿಓ ಕಸನಕ್ಕಿ ಅವರು ಬಹಳ ಕ್ರಿಯಾಶೀಲತೆಯೊಂದಿಗೆ ಕೆಲಸ ಮಾಡುತ್ತಿದ್ದಾರೆ ಇವರಿಗೆ ನಿಮ್ಮೆಲ್ಲರ ಸಹಕಾರ ಇರಲಿ, ಶ್ರೀ ಅಮೋಘಸಿದ್ಧ ಹಾಗೂ ಸಿದ್ಧಿ ಪುರುಷರ ಆಶೀರ್ವಾದ ಸದಾ ತಮ್ಮೊಂದಿಗೆ ಇರಲಿದೆ ಎಂದರು.

ಕಾರ್ಯಕ್ರಮದಲ್ಲಿ ತಾಪಂ ಇಓ ಅನಸೂಯಾ ಚಲವಾದಿ,ಎಇಇ ಆನಂದ ಸ್ವಾಮಿ,ವಿಲಾಸ್ ರಾಠೋಡ, ಮುಖಂಡರಾದ ರುದ್ರಗೌಡ ಪಾಟೀಲ, ಸಂಗನಗೌಡ ಪಾಟೀಲ,ಮಡು ಸೌಕಾರ ಬಿರಾದಾರ, ಮಲ್ಲನಗೌಡ ಬಿರಾದಾರ, ಸಿದ್ದು ಹಿರೇಕುರಬರ,ಯಮನೂರಿ ಒಡೆಯರ್, ಆದಿಲಶಾಹಿ ಕಡಕೋಳ, ತಿಪ್ಪಣ್ಣ ಹಿರೇಕುರಬರ, ರಾಮನಗೌಡ ಚೌದರಿ, ಸಿದ್ದು ಸಿಂಧನಕೇರಿ, ಸಿದ್ದರಾಯ ಹಿರೇಕುರಬರ, ಪ್ರಕಾಶ ಪಡಶೆಟ್ಟಿ, ಸಿದ್ದು ಅವಟಿ ಹಾಗೂ ಗ್ರಾಮಸ್ಥರು ಇದ್ದರು.

# ಶಾಮಸುಂದರ ದಾಸರ 70 ನೇ ವರ್ಷದ ಆರಾಧನೆ



ನೈಜ್ಯ ದೆಸೆ ನ್ಯೂಸ್

ಮಾನ್ವಿ: ಪಟ್ಟಣದ ಶ್ರೀ ಜಗನ್ನಾಥ ದಾಸರ ಮಂದಿರದಲ್ಲಿ ಶಾಮಸುಂದರ ದಾಸರ ಸೇವಾ ಸಮಿತಿ ವತಿಯಿಂದ ಶ್ರೀ ಶಾಮಸುಂದರ ದಾಸರ 70 ನೇ ವರ್ಷದ ಆರಾಧನೆ ಮಹೋತ್ಸವವನ್ನು ಆಚರಿಸಲಾಯಿತು.

ಶ್ರೀ ಶಾಮಸುಂದರ ದಾಸರ 70 ನೇ ವರ್ಷದ ಆರಾಧನೆ ಮಹೋತ್ಸವ ಅಂಗವಾಗಿ ಬೆಳಿಗ್ಗೆ 6 ಗಂಟೆಯಿಂದ ಶ್ರೀ ಜಗನ್ನಾಥ ದಾಸರ ಕಂಬಸ್ಥಂಭಕ್ಕೆ ಪಂಚಾಮೃತಾಭಿಷೇಕ,ವಿಶೇಷ ಅಲಂಕಾರ, ಶ್ರೀ ಸುಬುದೇಂದ್ರ ತೀರ್ಥ ಅಷ್ಟೋತ್ತರ ಸಮಿತಿಯಿಂದ ಶ್ರೀ ರಾಘವೇಂದ್ರ ಸ್ವಾಮಿಗಳ ಅಷ್ಟೋತ್ತರ ನೆರವೇರಿಸಲಾಯಿತು. ಪಂಡಿತ. ಭೀಮಸೇನ ದೇಸಾಯಿ ರವರು ಶಾಮಸುಂದರ ದಾಸರ ಜೀವನ ಹಾಗೂ ಅವರು ರಚಿಸಿದ ಕೃತಿಗಳ ಬಗ್ಗೆ ಪ್ರವಚನ ನೀಡಿದರು. ಡಾ.ವಿಜಯರಾವ ಕುಪನೇಶಿ ನೇತೃತ್ವದಲ್ಲಿ ಪಟ್ಟಣದ ಕಚೇರಿ ಆಂಜನೇಯಸ್ವಾಮಿ ದೇವಸ್ಥಾನದಿಂದ ಶ್ರೀ ಜಗನ್ನಾಥ ದಾಸರ ಮಂದಿರದ ವರೆಗೆ ಶಾಮಸುಂದರ ದಾಸರ ಭಾವಚಿತ್ರದೊಂದಿಗೆ ಗ್ರಾಮ ಪ್ರದಕ್ಷಿಣೆ ನಡೆಸಲಾಯಿತು.

ದಾಸರ್ಯ ಮಹಿಳಾ ಭಜನಾ ಮಂಡಳಿಯಿಂದ ದಾಸರ ಹಾಡುಗಳನ್ನು ಹಾಡಿದರು. ಶಾಮಸುಂದರ ದಾಸರ ಸೇವಾ ಸಮಿತಿ ಅಧ್ಯಕ್ಷ ವೆಂಕೋಬರಾವ ದೇಸಾಯಿ ಅರ್ನಳ್ಳಿ,ಎ. ಎನ್.ರಾಜು ವಕೀಲರು,ವಾಸುದೇವರಾವ ಕಪಗಲ್,ನರಸಿಂಹ ಅಪೂಟ,ಪ್ರಲ್ಹಾದ ಕುರ್ಡಿ,ಅರ್ಚಕ ಪ್ರಲ್ಹಾದಾಚಾರ್ಯ ಸೇರಿದಂತೆ ವಿಪ್ರಭಾಂದವರು ಹಾಗೂ ಅರ್ಯವೈಶ್ಯ ಸಮುದಾಯದವರು ಭಾಗವಹಿಸಿದರು.

## ಕೋಳಬಾಳ ಸರಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳ ಉತ್ತಮ ಸಾಧನೆ

ನೈಜ್ಯ ದೆಸೆ ನ್ಯೂಸ್

ಮಸ್ಕಿ: ತಾಲೂಕಿನ ಕೋಳಬಾಳ ಗ್ರಾಮದ ಸರಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿಗಳು 2025–26ನೇ ಸಾಲಿನ ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆಯುವ ಮೂಲಕ ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆಂದು ಶಾಲೆ ಮುಖ್ಯ ಶಿಕ್ಷಕರು ತಿಳಿಸಿದರು.

ಸೃಷ್ಟಿ 97% ಸಮಾಜ ವಿಜ್ಞಾನದಲ್ಲಿ 100 ಅಂಕ, ಪವಿತ್ರ 97.% ಕನ್ನಡದಲ್ಲಿ 125 ಅಂಕ, ವನುಜಾ 95%, ಸಹನಾ 95% ಕನ್ನಡ–125, ಹಿಂದಿ–100, ಸಮಾಜ ವಿಜ್ಞಾನ–100, ನಿವೇದಿತಾ 94 % ಕನ್ನಡದಲ್ಲಿ 125 ಅಂಕ, ರೇಣುಕಾ 89%, ಸಂಗೀತಾ 88% ಹಿಂದಿಯಲ್ಲಿ 100 ಅಂಕ ಪಡೆಯುವ ಮೂಲಕ ಸರಕಾರಿ ಪ್ರೌಢ ಶಾಲೆಗೆ ಕೀರ್ತಿ ತಂದಿದ್ದಾರೆ. ಎಂಟು ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 20 ವಿದ್ಯಾರ್ಥಿಗಳು ಪ್ರಥ–ಮ ಸ್ಥಾನ, ಇಬ್ಬರು ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿ ಪರೀಕ್ಷೆಗೆ ಕುಳಿತ ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾಗಿ ಪ್ರತಿಶತ ಶಾಲಾ ಫಲಿತಾಂಶ 100% ಆಗಿದ್ದು, ಶಾಲಾ ಗುಣಮಟ್ಟ ಫಲಿತಾಂಶ ಶೇಕಡ 90%. ಶಾಲೆಯ ಮುಖ್ಯ ಗುರುಗಳು ಹಾಗೂ ಸಹ ಶಿಕ್ಷಕರು, ಎಸ್ಡಿಎಂಸಿ ಅಧ್ಯಕ್ಷ ಮತ್ತು ಸರ್ವ ಸದಸ್ಯರು, ಗ್ರಾಮ ಪಂಚಾಯತಿಯ ಸದಸ್ಯರು ಊರಿನ ಶಿಕ್ಷಣ ಪ್ರೇಮಿಗಳು ವಿದ್ಯಾರ್ಥಿಗಳ ಸಾಧನೆಗೆ ಅಭಿನಂದನೆಗಳನ್ನು ತಿಳಿಸಿದ್ದಾರೆ.

# ರ್‍ಯಾಂಕ್ ವಿಜೇತ ವಿದ್ಯಾರ್ಥಿಯನ್ನು ಸನ್ಮಾನಿಸಿದ ಸಚಿವ ಎನ್.ಎಸ್,ಬೋಸರಾಜು

ನೈಜ್ಯ ದೆಸೆ ನ್ಯೂಸ್

ಮಾನ್ವಿ: ಪಟ್ಟಣದಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ರಾಜ್ಯಮಟ್ಟದಲ್ಲಿ 625 ಅಂಕಗಳನ್ನು ಪಡೆದು ರ್‍ಯಾಂಕ್ ಸಾಧಿಸಿದ ಮಾನ್ವಿಯ ವಿದ್ಯಾರ್ಥಿ ಸುಖದೇವರನ್ನು ಹಾಗೂ ಪಾಲಕರಾದ ಡಾ.ಪರಶುರಾಮ್ .ಚಂದ್ರಕಾಲರನ್ನು ತಾಲೂಕು ಆಡಳಿತವತಿಯಿಂದ ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವ ಎನ್. ಎಸ್.ಬೋಸರಾಜು ಸನ್ಮಾನಿಸಿ ಗೌರವಿಸುವ



ಮೂಲಕ ಅಭಿನಂದಿಸಿ ಮಾತನಾಡಿ ಮಾನ್ವಿ ತಾಲೂಕು ಕಳೆದ ಬಾರಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 30 ನೇ ಕ್ರಮಂಕದಾಖಲಿಸಿತ್ತು.

ಈ ಬಾರಿ ಶಿಕ್ಷಣ ಇಲಾಖೆ ಹಾಗೂ ಶಿಕ್ಷಕರ ಪರಿಶ್ರಮದಿಂದ 21 ನೇ ಸ್ಥಾನಕ್ಕೆ ಬಂದಿದು ರಾಜ್ಯಮಟ್ಟದಲ್ಲಿ ರ್‍ಯಾಂಕ್ ಕೂಡ ಬಂದಿರುವುದು ತಾಲೂಕಿನ ಶೈಕ್ಷಣಿಕ ಪ್ರಗತಿಯನ್ನು ಸೂಚಿಸುತ್ತದೆ ಎಂದು ತಿಳಿಸಿದರು. ಶಾಸಕ ಹಂಪಯ್ಯನಾಯಕ, ಬಿ.ವಿ.ರೆಡ್ಡಿ, ರಾಜಾ ಸುಭಾಶ್ಚಂದ್ರನಾಯಕ, ಮಹೇಶಕುಮಾರ,ಕಾಳಿಂಗಪ್ಪ ವಕೀಲರು,ರುದ್ರಪ್ಪ ಅಂಗಡಿ,ಅಮರೇಗೌಡ ಹಣಚಿನಾಳ್,ಸೈಯಾದ್ ಖಾಲಿದ್ ಖಾದ್ರಿ,ಸೇರಿದಂತೆ ಇನ್ನಿತರರು ಇದ್ದರು.

# ಸನ್ ರೈಸ್ ಕಾಲೇಜಿನಲ್ಲಿ ಮಾನಸಿಕ ಆರೋಗ್ಯ ಕುರಿತು ಶನಿವಾರದ ವಿಶೇಷ ಉಪನ್ಯಾಸ



ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಸಿಂಧನೂರಿನ ಸನ್ ರೈಸ್ ಡಿ ಫಾರ್ಮಸಿ ನರ್ಸಿಂಗ್ ಪ್ಯಾರ ಮೆಡಿಕಲ್ ಕಾಲೇಜಿನಲ್ಲಿ ಪ್ರತೀ ಶನಿವಾರದಂತೆ ಆಯೋಜಿಸಲಾದ ವಿಶೇಷ ಉಪನ್ಯಾಸ ಕಾರ್ಯಕ್ರಮವು ಇಂದು ಯಶಸ್ವಿಯಾಗಿ ನಡೆಯಿತು.

ಕಾರ್ಯಕ್ರಮಕ್ಕೆ ಸಿಂಧನೂರಿನ ಜೆ.ಸಿ ಮಾನಸ ಕ್ಲಿನಿಕ್‌ನ ಖ್ಯಾತ ಮಾನಸಿಕ ಹಾಗೂ ನರ ರೋಗ ತಜ್ಞರಾದ ಡಾ. ಅನಿಲ್ (MBBS, MD Psychiatry, Consultant Neuro) ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ "ಮಾನಸಿಕ ಆರೋಗ್ಯ ಹಾಗೂ ಆತಂಕ ಸಂಬಂಧಿತ ವ್ಯಾಧಿಗಳು" ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು. ತಮ್ಮ ಉಪನ್ಯಾಸದಲ್ಲಿ ಅವರು ಮಾನಸಿಕ ಆರೋಗ್ಯದ ಮಹತ್ವ, ಇಂದಿನ ಜೀವನಶೈಲಿಯಿಂದ ಉಂಟಾಗುತ್ತಿರುವ ಆತಂಕ ಮತ್ತು ಒತ್ತಡ ಸಮಸ್ಯೆಗಳು, ಅವುಗಳ ಲಕ್ಷಣಗಳು ಹಾಗೂ ಸೂಕ್ತ ಚಿಕಿತ್ಸೆ ಮತ್ತು ತಡೆಗಟ್ಟುವ ಕ್ರಮಗಳ ಕು–ರಿತು ವಿದ್ಯಾರ್ಥಿಗಳಿಗೆ ವಿವರವಾಗಿ ತಿಳಿಸಿದರು.

ಮಾನಸಿಕ ಆರೋಗ್ಯವನ್ನು ನಿರ್ಲಕ್ಷಿಸದೆ ಸಮಯಕ್ಕೆ ಸರಿಯಾದ ಸಲಹೆ ಮತ್ತು ಚಿಕಿತ್ಸೆ ಪಡೆಯುವುದು ಅತ್ಯಂತ ಅಗತ್ಯವೆಂದು ಅವರು ತಿಳಿಸಿದರು. ಇದೇ ಸಂದರ್ಭದಲ್ಲಿ ನರ್ಸಿಂಗ್ ವೃತ್ತಿಯ ಮಹತ್ವವನ್ನು ವಿವರಿಸಿದ ಅವರು, ರೋಗಿಗಳ ಸೇವೆಯಲ್ಲಿ ನರ್ಸ್‌ಗಳ ಪಾತ್ರ ಅತ್ಯಂತ ಪ್ರಮುಖವಾಗಿದ್ದು, ಸಹಾನುಭೂತಿ, ಸಹನೆ ಹಾಗೂ ಸೇವಾಭಾವವೇ ಉತ್ತಮ ನರ್ಸ್‌ನ ಗುರುತು ಎಂದು ಹೇಳಿದರು. ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ತಮ್ಮ ವೃತ್ತಿ ಜೀವನವನ್ನು ರೂಪಿಸಿಕೊಳ್ಳಬೇಕೆಂದು ಪ್ರೇರಣಾದಾಯಕ ಮಾತುಗಳನ್ನು ಹೇಳಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ ಪ್ರಶ್ನೋತ್ತರದ ಮೂಲಕ ತಮ್ಮ ಅನುಮಾನಗಳನ್ನು ನಿವಾ–ರಿಸಿಕೊಂಡರು. ಉಪನ್ಯಾಸವು ವಿದ್ಯಾರ್ಥಿಗಳಲ್ಲಿ ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಮೂಡಿಸಿ ಆತ್ಮವಿಶ್ವಾಸ ಹೆಚ್ಚಿಸಿದ ಪರಿಣಾಮಕಾರಿ ಕಾರ್ಯಕ್ರಮವಾಗಿ ನೆರವೇರಿತು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ವಿಶ್ವ ಮಲೇರಿಯಾ ದಿನಾಚರಣೆ–ಮಲೇರಿಯಾ ಮುಕ್ತ ಸಮಾಜ ನಿರ್ಮಾಣ ಮಾಡೋಣ ಡಾ.ಹನುಮಂತರೆಡ್ಡಿ

ನೈಜ್ಯ ದೆಸೆ ನ್ಯೂಸ್

ಸಿಂದನೂರು: ಪ್ರತಿ ವರ್ಷದಂತೆ ಏಪ್ರಿಲ್ 25 ರಂದು ವಿಶ್ವದಾದ್ಯಂತ "ವಿಶ್ವ ಮಲೇರಿಯಾ ದಿನ"ವನ್ನು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಮಲೇ–ರಿಯಾ ರೋಗವು ಮಾನವಕುಲಕ್ಕೆ ಒಡ್ಡಿರುವ ಸವಾಲುಗಳು ಮತ್ತು ಅದನ್ನು ಮೆಟ್ಟಿ ನಿಲ್ಲಲು ವಿಜ್ಞಾನಿಗಳು ನಡೆಸಿದ ಹೋರಾಟವನ್ನು ಸ್ಮ–ರಿಸುವುದು ಅತ್ಯಗತ್ಯವಾಗಿದೆ ಎಂದರು.

ಜಿಲ್ಲಾಡಳಿತ ಜಿಲ್ಲಾ ಪಂಚಾಯತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಯಚೂರು ಹಾಗೂ ತಾಲೂಕಾರೋಗ್ಯಾಧಿಕಾ–ರಿಗಳ ಕಾರ್ಯಾಲಯ ಸಿಂಧನೂರ,ನಗರ.ಆ.ಕೇಂದ್ರ ಸಿಂಧನೂರು ಮತ್ತು ಬಸವ ಪ್ಯಾರಾ ಮೆಡಿಕಲ್ ಕಾಲೇಜ್ ಸಿಂಧನೂರ ರವರ ಸಂಯುಕ್ತಾಶ್ರಯದಲ್ಲಿ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಇಂದು ನಡೆದ ವಿಶ್ವ ಮಲೇರಿಯಾ ದಿನ ದ ತಾಲೂಕಾ ಮಟ್ಟದ ಕಾರ್ಯವನ್ನು ಉದ್ದೇಶಿಸಿ ನಾತನಾಡಿದ ಹೃದಯತಜ್ಞರಾದ ಡಾ.ಹನುಮಂತರೆಡ್ಡಿ ಮಲೇರಿಯಾ ರೋಗವು ಪುರಾತನ ಕಾಲದಿಂದಲೂ ಮಾನವನ ಆರೋಗ್ಯಕ್ಕೆ ದೊಡ್ಡ ಪಿಡುಗಾಗಿ ಪರಿಣಮಿಸಿತ್ತು.

1897ರಲ್ಲಿ ಸರ್ ರೊನಾಲ್ಡ್ ರಾಸ್ ಅವರು ಮಲೇರಿಯಾ ಪರಾವಲಂಬಿ ಜೀವಿಗಳು



ಹೆಣ್ಣು ಅನಾಫಿಲಿಸ್ ಸೊಳ್ಳೆಗಳ ಮೂಲಕ ಮನುಷ್ಯನಿಗೆ ಹರಡುತ್ತವೆ ಎಂಬುದನ್ನು ಪತ್ತೆಹಚ್ಚುವ ಮೂಲಕ ವೈದ್ಯಕೀಯ ಲೋಕದಲ್ಲಿ ಹೊಸ ಕ್ರಾಂತಿ ಮಾಡಿದರು. ಈ ಸಂಶೋಧನೆಯೇ ಇಂದು ನಾವು ಮಲೇರಿಯಾವನ್ನು ನಿಯಂತ್ರಿಸಲು ಇರುವ ಪ್ರಮುಖ ಅಡಿಪಾಯವಾಗಿದೆ ಎಂದರು. ಹಿ.ಆ.ನಿರೀಕ್ಷಣಾಧಿಕಾರಿಯಾದ ರಂಗನಾಥ. ಜಿ ಮಾತನಾಡಿ ಈ ಮಾರಕ ರೋಗದಿಂದ ಸಂಭವಿಸುವ ಸಾವು–ನೋವುಗಳನ್ನು ತಡೆಗಟ್ಟಲು ಘನ ಸರ್ಕಾರಗಳು ರಾಷ್ಟ್ರೀಯ ವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮದ ಅಡಿಯಲ್ಲಿ ಸೊಳ್ಳೆಗಳ ನಿಯಂತ್ರಣಕ್ಕೆ ಲಾರ್ವಾ ಸಮೀಕ್ಷೆ, ಫಾಗಿಂಗ್ ಮತ್ತು ಉಚಿತ ಚಿಕಿತ್ಸೆಯಂತಹ ಹತ್ತು ಹಲವು ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿಗೆ ತಂದಿವೆ ಎಂದರು.

ತಾಲೂಕಾ ಕಛೇರಿಯ ಆರೋಗ್ಯ ಶಿಕ್ಷಣಾಧಿಕಾ–ರಿಯಾದ ಗೀತಾ ಹಿರೇಮಠ ಮಾತನಾಡಿ ಸರ್ಕಾರದ ಪ್ರಯತ್ನಗಳ ಜೊತೆಗೆ ಸಾರ್ವಜನಿಕರು ಈ ಕೆಳಗಿನ ಮುಂಜಾಗೃತಾ ಕ್ರಮಗಳನ್ನು ಕೈಗೊಳ್ಳುವುದು ಬಹಳ ಮುಖ್ಯವಾಗಿದೆ.

ಮನೆಯ ಸುತ್ತಮುತ್ತಲಿನ ಪರಿಸರದಲ್ಲಿ ನೀರು ನಿಲ್ಲದಂತೆ ಎಚ್ಚರಿಕೆ ವಹಿಸಬೇಕು ಹಾಗೂ ಹಳೆಯ ಟೈಯರ್, ಡಬ್ಬಿ ಮತ್ತು ಕುಂಡಗಳಲ್ಲಿ ನೀರು ಸಂಗ್ರಹವಾಗದಂತೆ ನೋಡಿಕೊಳ್ಳಬೇಕು. ನೀರು ಸಂಗ್ರಹಿಸುವ ತೊಟ್ಟಿಗಳನ್ನು ವಾರಕ್ಕೊಮ್ಮೆ ಕಡ್ಡಾಯವಾಗಿ ಸ್ವಚ್ಛಗೊಳಿಸಿ ಒಣ–ಗಿಸಬೇಕು. ಮಲಗುವಾಗ ಕಡ್ಡಾಯವಾಗಿ ಸೊಳ್ಳೆ ಪರದೆಗಳನ್ನು ಬಳಸಬೇಕು ಹಾಗೂ ಸೊಳ್ಳೆ ನಿಯಂತ್ರಣ ಕಿಟಕಿಗಳಿಗೆ ಜಾಲರಿ/ಮೆಸ್ ಗಳನ್ನು ಅಳವಡಿಸಿಕೊಳ್ಳಬೇಕು. ಒಂದು ವೇಳೆ ಜ್ವರ ಅಥ–ವಾ ಮಲೇರಿಯಾ ಲಕ್ಷಣಗಳಾದ ಛಳಿ ಕೂಡಿದ ಜ್ವರ,ವಿಪರೀತ ಬೆವರುವಿಕೆ,ಸ್ನಾಯು ಸೆಳೆತ,ಬಿಟ್ಟು ಬಿಟ್ಟು ಬರುವ ಜ್ವರ,1–14 ದಿನದ ಜ್ಬರ ದಂತಹ ಲಕ್ಷಣ ಕಂಡುಬಂದಲ್ಲಿ ವಿಳಂಬ ಮಾಡದೆ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಉಚಿತವಾಗಿ ರಕ್ತ ಪರೀಕ್ಷೆ ಸಂಪೂರ್ಣ ಚಿಕಿತ್ಸೆ ಪಡೆಯಬೇಕು ಎಂದರು.

ತಾಲೂಕಾ ವಿ.ಬಿ.ಡಿ ಮೇಲ್ವಿಚಾರಕ ಎಫ್.ಎ.ಹಣಗಿ ಮಾತನಾಡಿ ಅತಿ ಬಿಸಿಲಿನ ತಾಪಮಾನ,ಅತಿವೃಷ್ಟಿ,ಅನಾವೃಷ್ಟಿಯಂತಹ ಪ್ರಕೃತಿ ವಿಕೋಪಗಳು ಮನುಷ್ಯನಿಂದ ಆದಂತಹ ಘನಘೋರ ಅಪರಾಧದಿಂದ ಆದ ನೈಸರ್ಗಿಕ ಲೋಪವಾಗಿದೆ ಇದನ್ನು ಸರಿದೂಗಿಸಲು ಪ್ರತಿಯೊಬ್ಬರೂ ಹೆಚ್ಚು ಹೆಚ್ಚು ಮರಗಿಡಗಳನ್ನು ಬೆಳಸಬೇಕು ಅದರೊಟ್ಟಿಗೆ ಎಲ್ಲಿಯೂ ನೀರು ನಿಲ್ಲದಂತೆ ಎಚ್ಚರ ವಹಿಸಬೇಕು ಮಲೇರಿಯಾ ನಮ್ಮೊಂದಿಗೆ ಕೊನೆಗೊಳ್ಳುತ್ತದೆ, ಮರು ಹೂಡಿಕೆ ಮಾಡಿ, ಮರು ಕಲ್ಪನೆ ಮಾಡಿ, ಮರು ಉತ್ತೇಜನ ನೀಡೋಣ ಎಂಬ ಈ ವರ್ಷದ ಘೋಷವಾಕ್ಯ ದೊಂದಿಗೆ ಮಲೇರಿಯಾ ಮುಕ್ತ ಕರ್ನಾಟಕ ಗೊಳಿಸಲು ಸಾರ್ವಜನಿಕರು ಸಹರಿಸಲು ಕರೆ ನೀಡಿದರು.

ತಾಲೂಕಾ ಆರೋಗ್ಯ ಇಲಾಖೆ ಪ್ರತಿವರ್ಷ ಈ ಸೊಳ್ಳೆ ಗಳಿಂದ ಹರಡುವ ರೋಗ ನಿಯಂತ್ರಣದ ವಿಷಯಗಳ ಕುರಿತು ಜಾಗೃತಿ ಮೂಡಿಸಲಾಗುತ್ತಿದ್ದು ಜನರು ಭಯಪಡದೆ ಎಚ್ಚರ ವಹಿಸುವುದು ಸೂಕ್ತ ಎಂದರು. ತಾಲೂಕಿನ ಎಲ್ಲಾ ಸಾರ್ವಜನಿಕರು ಆರೋಗ್ಯ ಇಲಾಖೆ ನೀಡಿದ ಮುಂಜಾಗೃತಾ ಕ್ರಮಗಳನ್ನು ಪಾಲಿಸುವ ಮೂಲಕ ಮತ್ತು ಆರೋಗ್ಯ ಇಲಾಖೆಯೊಂದಿಗೆ ಸಹಕರಿಸುವ ಮೂಲಕ ಮಲೇರಿಯಾ ಮುಕ್ತ ತಾಲೂಕನ್ನಾಗಿ ಮಾಡಲು ಕೈಜೋಡಿಸಬೇಕೆಂದು ಈ ಮೂಲಕ ಕೋರಲಾಯಿತು. ಈ ಸಂಧರ್ಭದಲ್ಲಿ ತಾಲೂಕಿನ ಹಿ.ಆ.ನಿರೀಕ್ಷಕ ಸಂಗನಗೌಡ,ಬಸವ ಪ್ಯಾರಾ ಮೆಡಿಕಲ್ ಕಾಲೇಜ್ ನ ಮೇಘಾ.ಎಸ್.ಬಿ,ಮಂಜೂಳಾ ಮತ್ತು ನರ್ಸಿಂಗ್ ವಿದ್ಯಾರ್ಥಿಗಳು ಜಾಥಾ ಮಾಡುವ ಮೂಲಕ ಸಾಥ ನೀಡಿದರುಆರ್.ಕೆ.ಎಸ್.ಕೆಯ ರಾಮಾಂಜನೇಯ,–ಎನ್.ಸಿ.ಡಿ ಕಾರ್ಯಕ್ರಮದ ಮುತ್ತಮ್ಮ,–ಎಲ್.ಟಿ.ಓ ಗಾಯತ್ರಿ, ಗ್ರಾಮಾಂತರ ಪ್ರಾಥಮಿಕ ಆರೋಗ್ಯಕೇಂದ್ರದಿಂದ ಬಂದ ಕಿ.ಆ.ನಿರೀಕ್ಷಣಾಧಿಕಾ–ರಿಗಳಾದ ಆರ್.ಹೆಚ್2 ರ ಕಲ್ಮೇಶ,ಜವಳಗೇರಾದ ಅಂಬವ್ವ,ಮಹೇಶ ತುರ್ವಿಹಾಳ ನ ಪರಮೇಶ್ ಪಾಟ್ನೆ,ಬಾದರ್ಲಿಯ ರವಿರಾಜ ನಗರ.ಆ.ಕೇಂದ್ರದ ಪಿ.ಹೆಚ್.ಸಿ.ಓ ಕಮಲಾ,ಶಾಂತಾ ,ಅಂಬಾಮಠದಿಂದ ರೆಡ್ಡೆಪ್ಪಗೌಡ ಸಮುದಾಯ ಆರೋಗ್ಯ ಅಧಿಕಾರಿಗಳು ಹಾಗೂ ನಗರದ ಆಶಾ.ಕಾರ್ಯಕರ್ತೆಯರು ಹಾಜರಿದ್ದರು.

## ನೇಮಕಾತಿ ಪ್ರಕಟಣೆ

SSC ಸ್ಟೆನೋಗ್ರಾಫರ್ ನೇಮಕಾತಿ 2026 ? 731 ಸ್ಟೆನೋಗ್ರಾಫರ್ ಗ್ರೂಪ್ C, D ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಏಪ್ರಿಲ್ 24, 2026 ಖಖಅ ಸ್ಟೆನೋಗ್ರಾಫರ್ ನೇಮಕಾತಿ 2026: 731 ಸ್ಟೆನೋಗ್ರಾಫರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಸ್ಟಾಫ್ ಸೆಲೆಕ್ಷನ್ ಕಮಿಷನ್ (SSC) ಏಪ್ರಿಲ್ 2026 ರ ಖಖಅ ಅಧಿಕೃತ ಅಧಿಸೂಚನೆಯ ಮೂಲಕ ಸ್ಟೆನೋಗ್ರಾಫರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅಖಿಲ ಭಾರತ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 15–ಮೇ–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 24–04–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15–ಮೇ–2026 ಅರ್ಜಿ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: 15–05–2026 ಆನ್‌ಲೈನ್ ಪಾವತಿ ಸೇರಿದಂತೆ ಅರ್ಜಿ ನಮೂನೆ ತಿದ್ದುಪಡಿಗಾಗಿ ವಿಂಡೋ ದಿನಾಂಕಗಳು: 20–05–2026 ರಿಂದ 21–05–2026 ಕಂಪ್ಯೂಟರ್ ಆಧಾರಿತ ಪರೀಕ್ಷೆಯ ದಿನಾಂಕಗಳು: ಜುಲೈ – ಆಗಸ್ಟ್ 2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ: ಇಲ್ಲಿ ಕ್ಲಿಕ್ ಮಾಡಿ ಅಧಿಕೃತ ವೆಬ್‌ಸೈಟ್: ssc.gov.in

## ಮಾನ್ವಿ ನಗರದ ಕುಡಿಯುವ ನೀರಿನ ಸಮಸ್ಯೆ: ಅಧಿಕಾರಿಗಳು ಹಾಗೂ ಗುತ್ತಿಗೆದಾರರ ವಿರುದ್ಧ ಸಚಿವ ಎನ್.ಎಸ್. ಬೋಸರಾಜು ಆಕ್ರೋಶ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ನಗರದಲ್ಲಿ ಪದೇ ಪದೇ ಉಂಟಾಗುತ್ತಿರುವ ಕುಡಿಯುವ ನೀರಿನ ವ್ಯತ್ಯಯ ಹಾಗೂ ಕಾಮಗಾರಿಗಳ ವಿಳಂಬ ನೀತಿಯನ್ನು ಖಂಡಿಸಿ, ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ವಿಧಾನ ಪರಿಷತ್ತಿನ ಸಭಾ ನಾಯಕರಾದ ಶ್ರೀ ಎನ್.ಎಸ್. ಬೋಸರಾಜು ಅವರು ಅಧಿಕಾರಿಗಳು ಮತ್ತು ಗುತ್ತಿಗೆದಾರರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.**

ಇಂದು ಬೆಳಿಗ್ಗೆ ರಾಯಚೂರಿನ ತಮ್ಮ ನಿವಾಸದಲ್ಲಿ ಹಮ್ಮಿಕೊಂಡಿದ್ದ ತುರ್ತು ಸಭೆಯಲ್ಲಿ, ಮಾನ್ವಿ ನಗರದ ಕುಡಿಯುವ ನೀರಿನ ಸಮಸ್ಯೆಗಳ ಕುರಿತು ಅವರು ಸುದೀರ್ಘ ಚರ್ಚೆ ನಡೆಸಿದರು. ಅಮೃತ್–2 ಮತ್ತು ಜೆ.ಜೆ.ಎಂ (JJM) ಪೈಪ್‌ಲೈನ್ ನಿರ್ವಹಣೆ ಮಾಡುತ್ತಿರುವ ಕಂಪನಿಯ ಗುತ್ತಿಗೆದಾರರು ಹಾಗೂ ಅಧಿಕಾ–



ರಿಗಳ ನಿರ್ಲಕ್ಷ್ಯದಿಂದಾಗಿ ಸಾರ್ವಜನಿಕ–ರಿಗೆ ತೊಂದರೆಯಾಗುತ್ತಿರುವುದಕ್ಕೆ ಸಚಿವರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ನಗರದ ಮಲ್ಲಿಕಾರ್ಜುನ್ ಚಿತ್ರಮಂದಿರದ ಮುಂಭಾಗದಿಂದ ಬಸವ ವೃತ್ತದವರೆಗೆ ನಡೆಯುತ್ತಿರುವ ಕಾಮಗಾರಿಯಿಂದಾಗಿ ನಮಾಜ್ ಗೆರಗುಡ್ಡ ಹಾಗೂ ವಿಠಲ್ ನಗರದ ನೀರಿನ ಟ್ಯಾಂಕ್‌ಗಳಿಂದ ಸರಬರಾಜಾಗುವ ವಾರ್ಡ್ ಸಂಖ್ಯೆ 1, 2, 3, 4, 18, 19, 20, 25, 26, 27 ಸೇರಿದಂತೆ ಸುಮಾರು 12 ವಾರ್ಡ್‌ಗಳಿಗೆ ನೀರಿನ ಅಡಚಣೆ ಉಂಟಾಗಿದೆ.

ನಿಮ್ಮ ವಿಳಂಬ ನೀತಿಯಿಂದಾಗಿ ಮಾನ್ವಿ ನಗರದ ಜನತೆ ಕುಡಿಯುವ ನೀರಿಲ್ಲದೆ ಪರದಾಡುವಂತಾಗಿದೆ. ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುವ ಪರಿಸ್ಥಿತಿ ನಿರ್ಮಾಣವಾಗಿದೆ," ಎಂದು ಸಚಿವರು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು. ಸಭೆಯಲ್ಲಿ ಉಪಸ್ಥಿತರಿದ್ದ ಕರ್ನಾಟಕ ಕುಡಿಯುವ ನೀರು ಸರಬರಾಜು ಮಂಡಳಿಯ ಕಾರ್ಯಪಾಲಕ ಅಭಿಯಂತರರಾದ (EE) ಗುರುರಾಜ್, ಸಹಾಯಕ ಕಾರ್ಯಪಾಲಕ ಅಭಿಯಂತರರಾದ (AEE) ಚೌವಣ್ ಮತ್ತು ಗುತ್ತಿಗೆದಾರ ಗೌರವ್ ಅವರಿಗೆ ಕೂಡಲೇ ಸಮಸ್ಯೆ ಬಗೆಹರಿಸುವಂತೆ ಸೂಚಿಸಲಾಯಿತು. ಇಂದು ಮಧ್ಯಾಹ್ನ 12:30ಕ್ಕೆ ಮಾನ್ವಿ ನಗರದಲ್ಲಿ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಹಾಗೂ ಸಭೆ ನಡೆಸಲಾಗುವುದು. ಅದಾದ ನಂತರ ಮುಂದಿನ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು," ಎಂದು ಸಚಿವರು ಸ್ಪಷ್ಟಪಡಿಸಿದರು.

## ಬಿಇಒ ಕೆ.ಸಿ. ರಮೇಶ್‌ಗೆ ರಾಜ್ಯಮಟ್ಟದ 'ಕಾಯಕ ರತ್ನ' ಪ್ರಶಸ್ತಿ: ಅಭಿನಂದನೆಗಳ ಸುರಿಮಳೆ

ನೈಜ್ಯ ದೆಸೆ ನ್ಯೂಸ್

**ನೆಲಮಂಗಲ: ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ (ಬಿಇಒ) ಕೆ.ಸಿ. ರಮೇಶ್ ಅವರಿಗೆ ರಾಜ್ಯ ಸರ್ಕಾರಿ ನೌಕರರ ಸಂಸ್ಕೃತಿ ಮತ್ತು ಸಾಹಿತ್ಯ ಪರಿಷತ್ (ರಿ) ವತಿಯಿಂದ ನೀಡಲಾಗುವ ಪ್ರತಿಷ್ಠಿತ 'ಕಾಯಕ ರತ್ನ' ಪ್ರಶಸ್ತಿ ಲಭಿಸಿದೆ.**



ಏಪ್ರಿಲ್ 26ರಂದು ಧಾರವಾಡ ನಗರದ ನಾಡಾ.ಡಾ.ಪಾ.ಪು. ಭವನದಲ್ಲಿ ನಡೆಯಲಿರುವ ಸಂಸ್ಥೆಯ ರಾಜ್ಯ ಘಟಕ ಹಾಗೂ 35 ಜಿಲ್ಲೆಗಳ ಪದಾಧಿಕಾರಿಗಳ ಪದಗ್ರಹಣ ಸಮಾರಂಭದ ಅಂಗವಾಗಿ ಈ ರಾಜ್ಯಮಟ್ಟದ ಪ್ರಶಸ್ತಿಯನ್ನು ಸಾಧಕರಿಗೆ ಪ್ರದಾನ ಮಾಡಲಾಗುತ್ತಿದೆ. ಶೈಕ್ಷಣಿಕ ಕ್ಷೇತ್ರದಲ್ಲಿ ಕ್ರಿಯಾಶೀಲ ಸೇವೆ ಸಲ್ಲಿಸುತ್ತಿರುವ ಕೆ.ಸಿ. ರಮೇಶ್ ಅವರ ಈ ಸಾಧನೆಗೆ ವಿವಿಧ ವಲಯಗಳಿಂದ ಅಭಿನಂದನೆಗಳು ವ್ಯಕ್ತವಾಗಿವೆ. ಕ್ಷೇತ್ರದ ಶಾಸಕ ಎನ್. ಶ್ರೀನಿವಾಸ್, ನೆಲಮಂಗಲ ಯುವ ಒಕ್ಕೂಟದ ಅಧ್ಯಕ್ಷ ಎಂ.ಕೆ. ನಾಗರಾಜು, ನಗರಸಭೆ ಅಧ್ಯಕ್ಷ ಎನ್. ಗಣೇಶ್ ಸೇರಿದಂತೆ ಜನಪ್ರತಿನಿಧಿಗಳು ಅಭಿನಂದನೆ ಸಲ್ಲಿಸಿದ್ದಾರೆ. ಇದೇ ವೇಳೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಪನಿರ್ದೇಶಕ ಬೈಲಾಂಜಿನಪ್ಪ, ಜಿಲ್ಲಾ ಶಿಕ್ಷಣಾಧಿಕಾರಿ ಹೆಚ್. ಹನುಮಾನಾಯಕ್ ಸೇರಿದಂತೆ ವಿವಿಧ ಅಧಿಕಾರಿಗಳು, ಪರಿಷತ್ತಿನ ಪದಾಧಿಕಾ–ರಿಗಳು, ಶಿಕ್ಷಕರ ಹಾಗೂ ನೌಕರರ ಸಂಘಟನೆಗಳ ಮುಖಂಡರು, ಶಾಲೆಗಳ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು, ಖಾಸಗಿ ಶಾಲಾ ಆಡಳಿತ ಮಂಡಳಿಗಳು ಹಾಗೂ ಕಚೇರಿ ಸಿಬ್ಬಂದಿ ವರ್ಗ ಕೂಡ ರಮೇಶ್ ಅವರಿಗೆ ಶುಭಾಶಯ ಕೋರಿದ್ದಾರೆ.

## ಅಭಯಂತರಂಗ ಗ್ರಂಥ ಲೋಕಾರ್ಪಣೆ ಸಮಾರಂಭಕ್ಕೆ ಸಚಿವ ಎನ್.ಎಸ್. ಬೋಸುರಾಜು ಚಾಲನೆ



ನೈಜ್ಯ ದೆಸೆ ನ್ಯೂಸ್

**ರಾಯಚೂರು: ನಗರದ ಶ್ರೀ ಪಂಡಿತ್ ಜಂಬಲ್ದಿನ್ನಿ ರಂಗ ಮಂದಿರದಲ್ಲಿ ಶ್ರೀ ಗಿರಿ ಅಭಯ ಅಂಜನಯ್ಯ ಸ್ವಾಮಿ ಸೇವಾ ಸಮಿತಿ (ರಿ) ರಾಯಚೂರು ವತಿಯಿಂದ ಆಯೋಜಿಸಲಾದ 'ಅಭಯಂತರಂಗ' ಗ್ರಂಥ ಲೋಕಾರ್ಪಣೆ ಹಾಗೂ ಅಭಿನಂದನ ಸಮಾರಂಭವು ಭಾನುವಾರ ವಿಜೃಂಭಣೆಯಿಂದ ನಡೆಯಿತು.**

ಕಾರ್ಯಕ್ರಮವನ್ನು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ವಿಧಾನ ಪರಿಷತ್ತಿನ ಸಭಾ ನಾಯಕರಾದ ಶ್ರೀ ಎನ್. ಎಸ್. ಬೋಸುರಾಜು ಅವರು ಉದ್ಘಾಟಿಸಿದರು. ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಸಚಿವರು, ಸಾಹಿತ್ಯವು ಸಮಾಜದ ಮೌಲ್ಯಗಳನ್ನು ಉಳಿಸಿ ಬೆಳಸುವ ಮಹತ್ತರ ಸಾಧನವಾಗಿದ್ದು, ಗ್ರಂಥ ರಚನೆ ಹಾಗೂ ಲೋಕಾರ್ಪಣೆ ಕಾರ್ಯಕ್ರಮಗಳು ಸಮಾಜದಲ್ಲಿ ಜ್ಞಾನ ಮತ್ತು ಸಂಸ್ಕೃತಿ ವೃದ್ಧಿಗೆ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಹೇಳಿದರು. ಸಮಾಜ ಸೇವೆ ಹಾಗೂ ಆಧ್ಯಾತ್ಮಿಕ ಚಿಂತನೆಗಳನ್ನು ಜನರಿಗೆ ತಲುಪಿಸುವಲ್ಲಿ ಇಂತಹ ಸಂಘಟನೆಗಳ ಕಾರ್ಯ ಶ್ಲಾಘನೀಯವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ವೇಳೆ ಶ್ರೀ ಶರಣಬಸವ ದೇವರು ಶ್ರೀಗಳು ಆಶೀರ್ವಚನ ನೀಡಿ, ಆಧ್ಯಾತ್ಮಿಕತೆ ಮತ್ತು ಸಾಹಿತ್ಯ ಮಾನವ ಬದುಕಿಗೆ ಮಾರ್ಗದರ್ಶನ ನೀಡುವ ಶಕ್ತಿಗಳಾಗಿವೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಕೇ. ಶಾಂತಪ್ಪ, ರುದ್ರಪ್ಪ ಅಂಗಡಿ, ರಾಘವೇಂದ್ರ ಕುಷ್ಟಗಿ, ಚಾಮರಾಜ ಪಾಟೀಲ್ ಬೆಟ್ಟದೂರು, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಜಿಲ್ಲಾಧ್ಯಕ್ಷರಾದ ಮಹಾಂತೇಶ್ ಮಸ್ಕಿ, ಶರಣಪ್ಪಗೌಡ ಜಾಡಲ್ದಿನ್ನಿ, ಹರವಿ ನಾಗನಗೌಡ, ರಾಯಚೂರು ನಗರಸಭೆಯ ಮಾಜಿ ಸದಸ್ಯರಾದ ಶಿವಮೂರ್ತಿ, ಅಂಬರೇಗೌಡ ಹಂಚಿನಾಳ ಸೇರಿದಂತೆ ಗಣ್ಯರು ಉಪಸ್ಥಿತ–ರಿದ್ದು, ಸಂಘಟಕರಿಗೆ ಅಭಿನಂದನೆ ಸಲ್ಲಿಸಿದರು

## ಮೊದಲ ಹಂತದ ಮನೆಪಟ್ಟಿ ಸಮೀಕ್ಷೆ ಪೂರ್ಣಗೊಳಿಸಿದ ಗಣತಿದಾರರಿಗೆ ಅಭಿನಂದನೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ಕೇಂದ್ರ ಸರಕಾರದ ಭಾರತದ ಜನಗಣತಿ ಅಂಗವಾಗಿ ಮೊದಲ ಹಂತದ ಮನೆಪಟ್ಟಿ ಸಮೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಗಣತಿದಾರರನ್ನು ಹಾಗೂ ಮೇಲ್ವಿಚಾರಕರನ್ನು ಪಟ್ಟಣದ ಜನಗಣತಿ ಚಾರ್ಜ ಅಧಿಕಾರಿ ಹಾಗೂ ಪುರಸಭೆ ಮುಖ್ಯಾಧಿಕಾರಿ ಪರಶುರಾಮ ದೇವಮಾನೆ ಅಭಿನಂದಿಸಿ ಮಾತನಾಡಿ ಭಾರತ ಸರ್ಕಾರದ ಮಹತ್ವಕಾಂಕ್ಷೆಯೋಜನೆಯಾದ ಜನಗಣತಿ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಿ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ತಿಳಿಸಿದರು.**



ಮೊದಲ ಹಂತದ ಮನೆಪಟ್ಟಿ ಸಮೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಗಣತಿದಾರರಾದ ಪ್ರಮೋದಕುಮಾರ, ಸೋಮಶೇಖರ್, ಆಂಜನೇಯ್ಯ,ಶೋಭಾ, ರೆಹಮಾತ್ ಖಾನ್ ರನ್ನು ಸನ್ಮಾನಿಸಿ ಗೌರವಿಸಿ ಬಹುಮಾನಗಳನ್ನು ವಿತರಿಸಲಾಯಿತು. ಬೇಸಿಗೆ ಇರುವುದರಿಂದ ಗಣತಿದಾರ–ರಿಗೆ ಹಾಗೂ ಮೇಲ್ವಿಚಾರಕರಿಗೆ ಕುಡಿಯುವ ನೀರಿನ ಬಾಟಲ್ ಗಳನ್ನು ವಿತರಿಸಲಾಯಿತು.

## ಮುಖಂಡ ರುದ್ರಗೌಡರಿಗೆ ಶಾಸಕರಿಂದ ಸನ್ಮಾನ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕಿನ ಚಬನೂರ ಗ್ರಾಮದ ಸಮಗ್ರ ಅಭಿವೃದ್ಧಿಗಾಗಿ ಸುಮಾರು 10 ಕೋಟಿಯಷ್ಟು ಅನುದಾನವನ್ನು ತಂದಿರುವ ಗ್ರಾಮದ ಮುಖಂಡ ರುದ್ರಗೌಡ ಪಾಟೀಲ ಇವರನ್ನು ದೇವರ ಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ ಸನ್ಮಾನಿಸಿ ಗೌರವಿಸಿದರು.**




ಜ್ಯೋತಿಷ್ಯ ರತ್ನ ಪರಮ ಪೂಜ್ಯ ಶ್ರೀರಾಮ ಲಿಂಗಯ್ಯ ಮಹಾಸ್ವಾಮಿಗಳು ಸಾನಿಧ್ಯ ವಹಿಸಿದ್ದರು. ತಾಪಂ ಇಓ ಅನಸೂಯಾ ಚಲವಾದಿ,ಎಇಇ ಆನಂದಸ್ವಾಮಿ,ವಿಲಾಸ್ ರಾಠೋಡ,ಮುಖಂಡರಾದ ಸಂಗನಗೌಡ ಪಾಟೀಲ ಮಡುಸೌಕಾರ ಬಿರಾದಾರ ಮತ್ತಿತರರು.

## ಎಸ್ ಎಸ್ ಎಲ್ ಸಿ ಯಲ್ಲಿ 3ನೇ ರ್‍ಯಾಂಕ್ ಉತ್ತಮ ಸಾಧನೆಗೈದ ಶ್ರೀನಿವಾಸ್ ವಿದ್ಯಾರ್ಥಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಸನ್ಮಾನ

ನೈಜ್ಯ ದೆಸೆ ನ್ಯೂಸ್

**ಅರಕೇರಾ: 2025–26ನೇ ಸಾಲಿನ ಎಸ್. ಎಸ್.ಎಲ್.ಸಿ ಪರೀಕ್ಷೆಯಲ್ಲಿ ದೇವದುರ್ಗ ತಾಲೂಕು ಉತ್ತಮ ಸಾಧನೆಗೈದ ವಿದ್ಯಾರ್ಥಿಗೆ ಪರೀಕ್ಷೆ 1 ರಲ್ಲಿ ಅತಿ ಹೆಚ್ಚು ಅಂಕ ಪಡೆದು ತಾಲೂಕಿಗೆ 3ನೇ ರ?ಯಾಂಕ್ ಪಡೆದ ವಿದ್ಯಾರ್ಥಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಮಲ್ಲಿಕಾರ್ಜುನ ಅವರು ಸನ್ಮಾನಿಸಿದರು.**

ಅವರು ಸ್ವತ ಅರಕೇರಾ ಪಟ್ಟಣದಲ್ಲಿನ ಶ್ರೀ ಸಿದ್ದಯ್ಯ ಹವಲ್ದಾರ



ಸರಕಾರಿ ಬಾಲಕರ ಪ್ರೌಢ ಶಾಲೆಯ ವಿದ್ಯಾರ್ಥಿ ಸಾಧನೆ ಮಾಡಿದ ಶ್ರೀನಿವಾಸ ತಂದೆ ಶಿವರಾಜ ಸಾ.ಬಿ.ಗಣೇಕಲ್ 625 ಕ್ಕೆ 600 ಅಂಕ ಶೇ.96% ಪ್ರತಿಶತ ಗಳಿಸಿದ್ದು ವಿಶೇಷ ಸಾಧನೆ ಮಾಡಿದ ಪ್ರತಿಭಾನ್ವಿತ ವಿದ್ಯಾರ್ಥಿಯು ಶಾಲೆಗೆ ಮೊದಲ ಸ್ಥಾನ ಮತ್ತು ತಾಲೂಕಿಗೆ 3 ನೇ ಸ್ಥಾನ ಪಡೆದಿರುವ ವಿದ್ಯಾರ್ಥಿಗೆ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಕ್ಷೇತ್ರ ಸಮನ್ವಯ ಅಧಿಕಾರಗಳಾದ ಶಿವರಾಜ ಪೂಜಾರಿ, ಮುಖ್ಯೋಪಾಧ್ಯಯರಾದ ಹುಸೇನಬಾಷ, ಎಸ್‌ಎಸ್‌ಎಲ್‌ಸಿ ಪರೀಕ್ಷೆ ದೇವದುರ್ಗ ತಾಲೂಕು ನೋಡಲ್ ಅಧಿಕಾರಿಗಳಾದ ವೆಂಕಟೇಶ್, ಪ್ರಾಚಾರ್ಯರಾದ ಬುದ್ದಿವಂತಿ, ಅತಿಥಿ ಶಿಕ್ಷಕರಾದ ಬಸವಲಿಂಗಯ್ಯ ಸ್ವಾಮಿ ಹಿರೇಮಠ, ಶಿವಕರಣ, ಇಮ್ರಾನ್ ಕರ್ನೂಲ್ ಮತ್ತು ಪಾಲಕರು ಉಪಸ್ಥಿತರಿದ್ದರು.

# ಸನ್ ರೈಸ್ ಕಾಲೇಜಿನಲ್ಲಿ ವಿಶ್ವ ಮಲೇರಿಯ ದಿನ ದಿನಾಚರಣೆ

## ಮಲೇರಿಯಾ ತಡೆಗಟ್ಟುವಿಕೆ ಕುರಿತು ವಿದ್ಯಾರ್ಥಿಗಳಿಗೆ ಜಾಗೃತಿ ಸ್ವಚ್ಛತೆ ಮತ್ತು ಆರೋಗ್ಯದ ಮಹತ್ವದ ಕುರಿತು ಸಂದೇಶ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸಿಂಧನೂರ್ ನಗರದ ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್, ಪ್ಯಾರಾಮೆಡಿಕಲ್ ಕಾಲೇಜಿನಲ್ಲಿ ಏಪ್ರಿಲ್ 25ರಂದು ವಿಶ್ವದಾದ್ಯಂತ ಆಚರಿಸಲಾಗುವ ವಿಶ್ವ ಮಲೇರಿಯ ದಿನಾಚರಣೆ ಅಂಗವಾಗಿ ಕಾಲೇಜಿನಲ್ಲಿ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಮಲೇರಿಯಾ ರೋಗದ ತಡೆಗಟ್ಟುವಿಕೆ, ಸ್ವಚ್ಛತೆ ಮತ್ತು ಆರೋಗ್ಯ ಜಾಗೃತಿ ಕುರಿತು ನರ್ಸಿಂಗ್, ಪ್ಯಾರಾಮೆಡಿಕಲ್ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು.**

ಕಾರ್ಯಕ್ರಮವನ್ನು ಕಾಲೇಜಿನ ಪ್ರಾಂಶುಪಾಲರು ಉದ್ಘಾಟಿಸಿ ಮಾತನಾಡಿ, ಮಲೇ–ರಿಯಾ ಒಂದು ಸಾಂಕ್ರಾಮಿಕ ರೋಗವಾಗಿದ್ದು ಪರಿಸರ ಸ್ವಚ್ಛತೆ ಮತ್ತು ಸೊಳ್ಳೆ ನಿಯಂತ್ರಣದ ಮೂಲಕವೇ ಇದನ್ನು ತಡೆಗಟ್ಟಬಹುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಮಲೇರಿಯಾ ಹರಡುವ ವಿಧಾನ, ಲಕ್ಷಣಗಳು, ಮುನ್ನೆಚ್ಚರಿಕೆ




ಕ್ರಮಗಳು ಮತ್ತು ಸಮಯಕ್ಕೆ ಚಿಕಿತ್ಸೆ ಪಡೆಯುವ ಅಗತ್ಯತೆ ಕುರಿತು ಮಾಹಿತಿ ನೀಡಿದರು. ಮಲೇ–ರಿಯಾ ತಡೆಗಟ್ಟುವ ಪ್ರಮುಖ ವಿಧಾನಗಳಾವೆಂದರೆ

1. ಪರಿಸರ ನಿರ್ವಹಣೆ ಮನೆಯ ಸುತ್ತಮುತ್ತ ನೀರು ನಿಲ್ಲದಂತೆ ನೋಡಿಕೊಳ್ಳಬೇಕು ಹೂವಿನ ಕುಂಡ, ಫ್ರಿಜ್ ಟ್ರೇ, ಕುಡಿಯುವ ನೀರಿನ ಪಾತ್ರೆಗಳನ್ನು ನಿಯಮಿತವಾಗಿ ಸ್ವಚ್ಛಗೊಳಿಸಬೇಕು ಮಳೆ ನೀರು ಸಂಗ್ರಹವಾಗುವ ಸ್ಥಳಗಳನ್ನು ಮುಚ್ಚಬೇಕು. ಕಸದ ರಾಶಿ ಮತ್ತು ಮಣ್ಣು ಗುಂಡಿಗಳನ್ನು ತೆರವುಗೊಳಿಸಬೇಕು.

2. ಮನೆಮಟ್ಟದ ರಕ್ಷಣಾ ಕ್ರಮಗಳು ಕಿಟಕಿ ಮತ್ತು ಬಾಗಿಲುಗಳಿಗೆ ಜಾಲಿ ಅಳವಡಿಸಿಕೊಳ್ಳಿ ಮಸ್ಕಿಟೋ ಕಾಯಿಲ್, ಲಿಕ್ವಿಡ್ ರಿಪೆಲ್ಲೆಂಟ್ ಅಥವಾ ಸ್ಪ್ರೆ ಬಳಸಿ ಮಲಗುವಾಗ ಸೊಳ್ಳೆ ಜಾಲ ಬಳಸುವುದು ಅತ್ಯುತ್ತಮ ಕ್ರಮ

3. ವೈಯಕ್ತಿಕ ಆರೋಗ್ಯ ಸುರಕ್ಷತೆ ಸಂಜೆ ನಂತರ ಪೂರ್ಣಬಾಹು ಉಡುಪು ಧರಿಸಿ ಮಕ್ಕಳಿಗೆ ಹಾಗೂ ಗರ್ಭಿಣಿಯರಿಗೆ ವಿಶೇಷ ಜಾಗ್ರತೆ ವಹಿಸಿ



ಜ್ವರ ಕಂಡ ತಕ್ಷಣ ರಕ್ತ ಪರೀಕ್ಷೆ ಮಾಡಿಸಿಕೊಳ್ಳಿ

4. ವೈದ್ಯಕೀಯ ಮುನ್ನೆಚ್ಚರಿಕೆ ಆರೋಗ್ಯ ಇಲಾಖೆಯ ಸೂಚನೆಗಳನ್ನು ಪಾಲಿಸಿ ಉಚಿತ ಮಲೇರಿಯಾ ಪರೀಕ್ಷಾ ಶಿಬಿರಗಳಲ್ಲಿ ಭಾಗವಹಿಸಿ ವೈದ್ಯರ ಸಲಹೆಯಂತೆ ಪೂರ್ಣ ಔಷಧ ಸೇವನೆ ಮಾಡಬೇಕು.

ಮಲೇರಿಯಾ ಲಕ್ಷಣಗಳನ್ನು ನಿರ್ಲಕ್ಷಿಸಬೇಡಿ ಏಕೆಂದರೆ ಮಲೇ–ರಿಯಾದಿಂದ ಹಠಾತ್ ಜ್ವರ ಮತ್ತು ನಡುಕ ತಲೆನೋವು ಮತ್ತು ದೇಹ ನೋವು ವಾಂತಿ, ದೌರ್ಬಲ್ಯ ಬೆವರು ಹೆಚ್ಚು ಬರುತ್ತಿರುವುದುನಂತರ ವಿದ್ಯಾರ್ಥಿಗಳು "ಸ್ವಚ್ಛ ಪರಿಸರ ಆರೋಗ್ಯಕರ ಜೀವನ" ಎಂಬ ಸಂದೇಶದೊಂದಿಗೆ ಜಾಗೃತಿ ಪ್ರತಿಜ್ಞೆ ಸ್ವೀಕ–ರಿಸಿದರು. ಜೊತೆಗೆ ಪೋಸ್ಟರ್ ಪ್ರದರ್ಶನ,ಜಾಗೃತಿ ಘೋಷಣೆಗಳು"ಸ್ವಚ್ಛ ಗ್ರಾಮ ಮಲೇ–ರಿಯಾ ರಹಿತ ಜೀವನ" "ಸೊಳ್ಳೆ ಇಲ್ಲದ ಪರಿಸರವೇ ಆರೋಗ್ಯದ ಆಧಾರ" "ನಾವು ಜಾಗರೂಕರಾದರೆ ಮಲೇರಿಯಾ ದೂರವಾಗುತ್ತದೆ" ಕಾರ್ಯಕ್ರಮಗಳಲ್ಲಿ ಬಳಸಬಹುದಾದ ಸಂದೇಶ "ಮಲೇರಿಯಾ ತಡೆಗಟ್ಟುವುದು ಕೇವಲ ಆರೋಗ್ಯ ಇಲಾಖೆಯ ಹೊಣೆಗಾರಿಕೆ ಅಲ್ಲ; ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ.

ಸ್ವಚ್ಛತೆ, ಜಾಗೃತಿ ಮತ್ತು ಸಮಯಕ್ಕೆ ಚಿಕಿತ್ಸೆ ಪಡೆಯುವ ಮೂಲಕ ಆರೋಗ್ಯಕರ ಸಮಾಜವನ್ನು ನಿರ್ಮಿಸೋಣ." ಎಂದು ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯರಾದ ಲಾಜರ ಸಿರಿಲ್ , ಉಪನ್ಯಾಸಕರಾದ ವೀರೇಶ್ ಸಂತೋಷಿ, ಶೋಭಾ ವೀರೇಶ್ವರಿ, ಸುಧಾ, ಅಶುಪಾಷಾ , ರಾಜೇಶ್ , ಚೈತ್ರ, ಸನ್ ರೈಸ್ ಕಾಲೇಜ್ ನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### B.Tech in Textile Engineering

B.Tech in Textile Engineering (ಟೆಕ್ಸ್‌ಟೈಲ್ ಇಂಜಿನಿಯರಿಂಗ್) ಎಂಬುದು 4 ವರ್ಷಗಳ (8 ಸೆಮಿಸ್ಟರ್‌ಗಳು) ಅಂಡರ್‌ಗ್ರಾಜುಯೇಟ್ ಇಂಜಿನಿಯರಿಂಗ್ ಕೋರ್ಸ್ ಆಗಿದೆ. ಇದು ಬಟ್ಟೆ ಉತ್ಪಾದನೆ, ವಿನ್ಯಾಸ, ತಂತ್ರಜ್ಞಾನ ಮತ್ತು ಸಂಸ್ಕರಣೆಯ (processing) ಮೇಲೆ ಗಮನಹರಿಸುತ್ತದೆ. ಈ ಕೋರ್ಸ್ ನೂಲು (yarn), ಬಟ್ಟೆ (fabric) ಮತ್ತು ರಾಸಾಯನಿಕ ಸಂಸ್ಕರಣೆಯ ಬಗ್ಗೆ ವಿದ್ಯಾರ್ಥಿಗಳಿಗೆ ತಾಂತ್ರಿಕ ಜ್ಞಾನವನ್ನು ನೀಡುತ್ತದೆ. ಅರ್ಹತೆ (Eligibility): ಪಿಯುಸಿ (10+2) ನಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತ (PCM) ವಿಷಯಗಳಲ್ಲಿ ಕನಿಷ್ಠ 45%–50% ಅಂಕಗಳನ್ನು ಪಡೆದಿರಬೇಕು. ಪ್ರವೇಶ ಪರೀಕ್ಷೆ (Entrance Exams): ಕೆ–ಸಿಇಟಿ (KCET), ಜೆಇಇ ಮೇನ್ (JEE Main) ಅಥವಾ ಆಯಾ ರಾಜ್ಯಗಳ ಪ್ರವೇಶ ಪರೀಕ್ಷೆಗಳ ಮೂಲಕ ಪ್ರವೇಶ ಪಡೆಯಬಹುದು. ಕೋರ್ಸ್ ಅವಧಿ: 4 ವರ್ಷಗಳು (8 ಸೆಮಿಸ್ಟರ್‌ಗಳು). ಶುಲ್ಕ: ವಾರ್ಷಿಕ ಸುಮಾರು 40,000 ದಿಂದ 1 ಲಕ್ಷದವರೆಗೆ (ಕಾಲೇಜಿನ ಆಧಾರದ ಮೇಲೆ). ಕೋರ್ಸ್ ವಿಷಯಗಳು (Syllabus Highlights): ಕ್ಸ್‌ಟೈಲ್ ಫೈಬರ್ ಸೈನ್ಸ್ (Textile Fiber Science) ಯಾರ್ನ್ ಮ್ಯಾನುಫ್ಯಾಕ್ಚರಿಂಗ್ (Yarn Manufacturing) ಫ್ಯಾಬ್ರಿಕ್ ಮ್ಯಾನುಫ್ಯಾಕ್ಚರಿಂಗ್ (Fabric Manufacturing) ಟೆಕ್ಸ್‌ಟೈಲ್ ಕೆಮಿಕಲ್ ಪ್ರೊಸೆಸಿಂಗ್ (Dyeing & Printing) ಟೆಕ್ನಿಕಲ್ ಟೆಕ್ಸ್‌ಟೈಲ್ಸ್ (Technical Textiles) ಉದ್ಯೋಗಾವಕಾಶಗಳು (Career Scope): ಟೆಕ್ಸ್‌ಟೈಲ್ ಇಂಜಿನಿಯರ್ ಪ್ರಾಡಕ್ಟ್ ಡೆವಲಪರ್ (Product Developer) ಕ್ವಾಲಿಟಿ ಕಂಟ್ರೋಲ್ ಮ್ಯಾನೇಜರ್ (Quality Control Manager) ಅಪ್ಪಾರೆಲ್ ಪ್ರೊಡಕ್ಷನ್ ಮ್ಯಾನೇಜರ್ (Apparel Production Manager) ಸಂಬಳ (Salary): ಟೆಕ್ಸ್‌ಟೈಲ್ ಇಂಜಿನಿಯರ್‌ಗಳು ಆರಂಭದಲ್ಲಿ ವರ್ಷಕ್ಕೆ ಸರಾಸರಿ 3 ಲಕ್ಷಕ್ಕೂ ಹೆಚ್ಚು ವೇತನ ಪಡೆಯಬಹುದು. ಅನುಭವದೊಂದಿಗೆ ಇದು ಗಮನಾರ್ಹವಾಗಿ ಹೆಚ್ಚಾಗುತ್ತದೆ. ಬೆಂಗಳೂರಿನಂತಹ ನಗರಗಳಲ್ಲಿ ಹೆಚ್ಚಿನ ಸಂಬಳ ಲಭ್ಯವಿದೆ.

# ಸಿರವಾರದಲ್ಲಿ ವಿವಿಧ ಸಮುದಾಯ ಭವನ ಹಾಗೂ ರಸ್ತೆ ಕಾಮಗಾರಿಗಳಿಗೆ ಭೂಮಿ ಪೂಜೆ

## 3.89 ಕೋಟಿ ವೆಚ್ಚದ ಅಭಿವೃದ್ಧಿ ಕಾರ್ಯಗಳಿಗೆ ಸಚಿವ ಎನ್.ಎಸ್. ಬೋಸರಾಜು ಹಾಗೂ ಶಾಸಕ ಹಂಪಯ್ಯ ನಾಯಕ್ ಚಾಲನೆ

ನೈಜ್ಯ ದೆಸೆ ನ್ಯೂಸ್

**ಸಿರವಾರ: ಮಾನ್ವಿ ವಿಧಾನಸಭಾ ಕ್ಷೇತ್ರದ ಸಿರವಾರ ತಾಲೂಕಿನಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ವೇಗ ನೀಡುವ ಉದ್ದೇಶದಿಂದ ಸಿರವಾರ ಪಟ್ಟಣ ಹಾಗೂ ವಿವಿಧ ಗ್ರಾಮಗಳಲ್ಲಿ ವಿವಿಧ ಸಮಾಜಗಳ ಸಮುದಾಯ ಭವನಗಳು ಹಾಗೂ ರಸ್ತೆ ಕಾಮಗಾರಿಗಳಿಗೆ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಪರಿಷತ್ತಿನ ಸಭಾ ನಾಯಕ ಶ್ರೀ ಎನ್.ಎಸ್. ಬೋಸರಾಜು ಮತ್ತು ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕ ಶ್ರೀ ಜಿ. ಹಂಪಯ್ಯ ನಾಯಕ್ ಅವರು ಭೂಮಿ ಪೂಜೆ ನೆರವೇರಿಸಿದರು.**

ಜಾಲಾಪುರ ಕ್ಯಾಂಪಿನಲ್ಲಿ ಕಮ್ಮ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ ?20 ಲಕ್ಷ ಅನುದಾನ ನೀಡಲಾಗಿದ್ದು, ಸಿರವಾರ ಪಟ್ಟಣದ ವಾರ್ಡ್ ಸಂಖ್ಯೆ 12ರಲ್ಲಿ ರಾಯಚೂರು?ಲಿಂಗಸಗೂರು ಮುಖ್ಯ ರಸ್ತೆಯಿಂದ ಪಟ್ಟಣ ಪಂಚಾಯಿತಿ ಮುಖಾಂತರ ಚಂದ್ರಪ್ಪ ಪೊಲೀಸ್ ಅವರ ಮನೆವರೆಗೆ ?1 ಕೋಟಿ ವೆಚ್ಚದಲ್ಲಿ ರಸ್ತೆ ನಿರ್ಮಾಣ



ಕಾಮಗಾರಿಗೆ ಚಾಲನೆ ನೀಡಲಾಯಿತು. ಇದರ ಜೊತೆಗೆ ವಿವಿಧ ಸಮಾಜಗಳ ಸಮುದಾಯ ಭವನ ಹಾಗೂ ಧಾರ್ಮಿಕ ಕೇಂದ್ರಗಳ ಅಭಿವೃದ್ಧಿಗೆ ಅನುದಾನ ಘೋಷಿಸಲಾಯಿತು. ಬ್ರಾಹ್ಮಣ ಸಮಾಜ, ಗಂಗಮತ ಸಮಾಜಗಳಿಗೆ ತಲಾ ?20 ಲಕ್ಷ, ಬ್ರಹ್ಮಕುಮಾರಿ ಸಮುದಾಯ ಭವನ ಅಭಿವೃದ್ಧಿಗೆ ?10 ಲಕ್ಷ, ದರ್ಜಿ ಸಮುದಾಯ ಭವನ ಹಾಗೂ ಶ್ರೀ ಅಂಬಾದೇವಿ ದೇವಸ್ಥಾನ ಅಭಿವೃದ್ಧಿಗೆ ?14.84 ಲಕ್ಷ, ಚರ್ಚ್ ಅಭಿವೃದ್ಧಿಗೆ ?20 ಲಕ್ಷ, ಶ್ರೀ ಈಶ್ವರ ದೇವಸ್ಥಾನ ಹಾಗೂ ಶ್ರೀ ವೀರಭದ್ರೇಶ್ವರ ದೇವಸ್ಥಾನಗಳ ಅಭಿವೃದ್ಧಿಗೆ 50 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ.

ಅದೇ ರೀತಿಯಾಗಿ ಗದಗಿ ಮಠದ ಕಾಂಪೌಂಡ್ ಗೋಡೆ ನಿರ್ಮಾಣಕ್ಕೆ 20 ಲಕ್ಷ, ಹಡಪದ ಸಮಾಜದ ಸಮುದಾಯ ಭವನಕ್ಕೆ ?20 ಲಕ್ಷ, ಸವಿತಾ ಸಮಾಜದ ಸಮುದಾಯ ಭವನಕ್ಕೆ ?15 ಲಕ್ಷ, ಮುಸ್ಲಿಂ ಶಾದಿ ಮಹಲ್ ಅಭಿವೃದ್ಧಿಗೆ ?50 ಲಕ್ಷ ಹಾಗೂ ವಿಶ್ವಕರ್ಮ ಸಮಾಜದ ಸಮುದಾಯ



ಭವನಕ್ಕೆ ?10 ಲಕ್ಷ ಅನುದಾನ ಒದಗಿಸಲಾಗಿದೆ. ಒಟ್ಟು ?3 ಕೋಟಿ 89 ಲಕ್ಷ 84 ಸಾವಿರ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸಚಿವರು ಮತ್ತು ಶಾಸಕರು ಭೂಮಿ ಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಚುಕ್ಕಿ ಸೂಗಪ್ಪ ಸಾಹುಕಾರ್, ಪಂಚ ಗ್ಯಾರಂಟಿ ಅಧ್ಯಕ್ಷ ಬ್ರಿಜೇಶ್ ಪಾಟೀಲ್, ಚುಕ್ಕಿ ಶಿವಾನಂದ್ ಸಾಹುಕಾರ್, ಶ್ರೀನಿವಾಸ್ ರೆಡ್ಡಿ, ಶಿವಮೂರ್ತಿ ರಾಯಚೂರು, ರುದ್ರಪ್ಪ ಅಂಗಡಿ, ಅಮರೇಗೌಡ ಹಂಚಿನಾಳ, ಪಟ್ಟಣ ಪಂಚಾಯಿತಿ ಅಧ್ಯಕ್ಷ ಹಾಜಿ ಚೌದರಿ, ಸದಸ್ಯರಾದ ಮೌಲಾಸಾ ವರ್ಚಸ್, ಹಸನ್ ಅಲಿ ಸಾಬ್, ದಾನನ ಗೌಡ, ಚಂದ್ರುಕಳಸ, ಶಿವಶರಣ ಅರಿಕೇರಿ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ರೇಣುಕಾ, ಬಸವರಾಜ್ ಕಲ್ಲೂರ್ ಸೇರಿದಂತೆ ಜನಪ್ರತಿನಿಧಿಗಳು, ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಜೀವನೋಪಾಯಕ್ಕಾಗಿ ಬೀದಿಬದಿ ವ್ಯಾಪಾರಸ್ಥರ ಧರಣಿ



ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದಲ್ಲಿ ಬದುಕಿನ ಹಕ್ಕಿಗಾಗಿ ಬೀದಿ ಬದಿ ವ್ಯಾಪಾರಸ್ಥರು ನಡೆಸುತ್ತಿರುವ ಧರಣಿ ಹೋರಾಟ ಮುಂದುವರಿದಿದ್ದು, ಪರ್ಯಾಯ ಜಾಗೆ ಅಧಿಕೃತವಾಗಿ ಗುರುತಿಸಿ ನೀಡುವವರೆಗೆ ಹೋರಾಟ ಹಿಂಪಡೆಯುವುದಿಲ್ಲ ಎಂದು ವ್ಯಾಪಾರಸ್ಥರು ಸ್ಪಷ್ಟಪಡಿಸಿದ್ದಾರೆ.**

ಕಳೆದ ವರ್ಷ ಯಾವುದೇ ಮುನ್ನೆಚ್ಚರಿಕೆ ನೀಡದೇ ಡಬ್ಬಾ ಅಂಗಡಿಗಳನ್ನು ತೆರವುಗೊಳಿಸಿದ ಪರಿಣಾಮ ನೂರಾರು ಕುಟುಂಬಗಳು ಉದ್ಯೋಗ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿವೆ ಎಂದು ಪ್ರತಿಭಟನಾಕಾರರು ಆರೋಪಿಸಿದರು. ಶನಿವಾರ ಮಧ್ಯಾಹ್ನ ತೋಟಗಾರಿಕೆ ಇಲಾಖೆಯ ಮುಂಭಾಗದಲ್ಲಿ ನಡೆದ ಧರಣಿ ವೇಳೆ ಅಧಿಕಾರಿಗಳು ಮತ್ತು ವ್ಯಾಪಾರಸ್ಥರ ನಡುವೆ ತೀವ್ರ ವಾಗ್ವಾದ ಉಂಟಾಯಿತು. ತೋಟಗಾರಿಕೆ ಇಲಾಖೆಯ ಅಧಿಕಾರಿ ಮಹ್ಮದ್ ಅಲಿ ಮಾತನಾಡಿ, ಇಲಾಖೆಗೆ ಸೇರಿದ ಜಾಗೆಯಲ್ಲಿ ಅಂಗಡಿಗಳನ್ನು ಇಡಲು ಅವಕಾಶವಿಲ್ಲ ಎಂದು ತಿಳಿಸಿದರೆ, ಪ್ರತಿಭಟನಾಕಾರರು



ಜಾಗೆಯ ಮಾಲೀಕತ್ವದ ದಾಖಲೆಗಳನ್ನು ಸಾರ್ವಜನಿಕವಾಗಿ ನೀಡುವಂತೆ ಒತ್ತಾಯಿಸಿದರು.

ಹದ್ದುಬಸ್ತ್ ಗುರುತಿಸದೇ ವ್ಯಾಪಾರಕ್ಕೆ ಅಡ್ಡಿಪಡಿಸುವುದು ಸರಿಯಲ್ಲ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಸಿಪಿಐ ವೀರಾರೆಡ್ಡಿ ನೇತೃತ್ವದ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಸ್ಥಿತಿಯನ್ನು ನಿಯಂತ್ರಿಸಿದರು. ಬೀದಿ ವ್ಯಾಪಾರಿ ಖಾಸಿಂಸಾಬ್ ಕಾರ್ಪೆಂಟರ್ ಮಾತನಾಡಿ, "ಒಂದೂವರೆ ವರ್ಷದಿಂದ ಉದ್ಯೋಗವಿಲ್ಲದೆ ಅನೇಕ ಕುಟುಂಬಗಳು ಸಂಕಷ್ಟ ಅನುಭವಿಸುತ್ತಿವೆ. ಶಾಸಕರ ಮೌಖಿಕ ಸೂಚನೆಯಂತೆ ತೋಟಗಾರಿಕೆ ಇಲಾಖೆಯ ಕಾಂಪೌಂಡ್‌ಗೆ ಹೊಂದಿಕೊಂಡ ಜಾಗೆಯಲ್ಲಿ ನಗರಸಭೆ ಸಿದ್ಧಪಡಿಸಿದ ಪಟ್ಟಿಯ ಪ್ರಕಾರ 127 ಡಬ್ಬಾ ಅಂಗಡಿಗಳನ್ನು ಮಾತ್ರ ಇಡುವಂತೆ ನಿರ್ಧರಿಸಲಾಗಿತ್ತು. ಆದರೂ ಅಧಿಕಾರಿಗಳು ಏಕಾಏಕಿ ಹಿಟಾಚಿ ಯಂತ್ರಗಳ ಮೂಲಕ ಅಂಗಡಿಗಳನ್ನು ತೆರವುಗೊಳಿಸಿ ನಮ್ಮ ಬದುಕಿನ ಮೇಲೆ ಹೊಡೆತ ನೀಡಿದ್ದಾರೆ" ಎಂದು ಆರೋಪಿಸಿದರು.

ಸಿಪಿಐ (ಎಂಎಲ್) ಮಾಸ್‌ಲೈನ್ ರಾಜ್ಯ ಕಾರ್ಯದರ್ಶಿ ಡಿ.ಎಚ್. ಪೂಜಾರ್ ಮಾತನಾಡಿ, ತೋಟಗಾರಿಕೆ ಇಲಾಖೆಯ ಜಾಗೆಯಲ್ಲಿ ನಡೆದಿರುವ ಅತಿಕ್ರಮಣಗಳ ಬಗ್ಗೆ ಸಮಗ್ರ ಸರ್ವೆ ನಡೆಸಿ ಹದ್ದುಬಸ್ತ್ ಗುರುತಿಸಬೇಕು. ಸಣ್ಣ ವ್ಯಾಪಾರಸ್ಥರಿಗೆ ಜೀವನೋಪಾಯ ನಡೆಸಲು ಕಾನೂನುಬದ್ಧವಾಗಿ ಜಾಗೆ ನೀಡುವುದು ಆಡಳಿತದ ಜವಾಬ್ದಾರಿಯಾಗಿದೆ ಎಂದು ಒತ್ತಾಯಿಸಿದರು. ಹೋರಾಟಗಾರ ಚಂದ್ರಶೇಖರ ಗೊರಬಾಳ ಮಾತನಾಡಿ, ಸಣ್ಣಪುಟ್ಟ ವ್ಯಾಪಾರವನ್ನೇ ನಂಬಿಕೊಂಡಿರುವ ಜನರನ್ನು ಪರ್ಯಾಯ ವ್ಯವಸ್ಥೆ ನೀಡದೇ ಬೀದಿಗೆ ತಳ್ಳುವುದು ಅಪ್ರಜಾತಾಂತ್ರಿಕ ಕ್ರಮವಾಗಿದೆ. ಜಿಲ್ಲಾಡಳಿತ, ತಾಲೂಕು ಆಡಳಿತ ಹಾಗೂ ಜನಪ್ರತಿನಿಧಿಗಳು ತಕ್ಷಣ ಮಧ್ಯಪ್ರವೇಶಿಸಿ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಬಿ.ಎನ್. ಯರದಿಹಾಳ, ಅಸ್ಲಾಂ, ರಹೀಮ್, ಜಾಗೀರಸಾಬ್, ಹುಸೇನ್‌ಸಾಬ್, ರಸೂಲ್‌ಸಾಬ್, ಅಜ್ಜು ಸೇರಿದಂತೆ ಹಲವಾರು ಬೀದಿ ವ್ಯಾಪಾರಸ್ಥರು ಭಾಗವಹಿಸಿ ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರಕ್ಕೆ ಮನವಿ ಮಾಡಿದರು.

## ಸಿದ್ಧಾಂತಗಳು ಬದಲಾಗಿವೆ,ಹಳೆಯ ಸಿದ್ದರಾಮಯ್ಯ ಈಗಿಲ್ಲ : ಕೇಂದ್ರ ಸಚಿವ ವಿ. ಸೋಮಣ್ಣ

ನೈಜ್ಯ ದೆಸೆ ನ್ಯೂಸ್

**ಮೈಸೂರು: ಹಳೆಯ ಸಿದ್ದರಾಮಯ್ಯ ಈಗ ಕಾಣುತ್ತಿಲ್ಲ, ಅವರ ಸಿದ್ಧಾಂತಗಳು ಬದಲಾಗಿವೆ ಎಂದು ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ ಅವರು ಗುರುವಾರ ಹೇಳಿದ್ದಾರೆ.**



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, "ಹಳೆಯ ಸಿದ್ದರಾಮಯ್ಯ ಹಾಗೂ ಅವರ ತತ್ವಗಳು ಈಗ ಕಾಣಿಸುತ್ತಿಲ್ಲ. ಈಗಿನ ಸಿದ್ದರಾಮಯ್ಯ ಅಧಿಕಾರಕ್ಕಾಗಿ ಮಾತ್ರ ಕೆಲಸ ಮಾಡುತ್ತಿದ್ದಾರೆ" ಎಂದು ಟೀಕಿಸಿದರು. ಸಿದ್ದರಾಮಯ್ಯ ಹಾಗೂ ನಾನು ಒಟ್ಟಿಗೆ ಕೆಲಸ ಮಾಡಿದವರು. ಅವರನ್ನು ಹತ್ತಿರದಿಂದ ಬಲ್ಲೆ. ಅವರಿಗೆ ನಿಜವಾದ ಕಾಳಜಿ ಇದ್ದರೆ ಮಹಿಳಾ ಮೀಸಲು ಬಗ್ಗೆ ತಮ್ಮ ನಾಯಕರಿಗೆ ತಿಳಿಹೇಳಬೇಕು ಎಂದು ಹೇಳಿದರು. ಇದೇ ವೇಳೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಮಂತ್ರಿ ನರೇಂದ್ರ ಮೋದಿ ವಿರುದ್ಧ ನೀಡಿರುವ ಹೇಳಿಕೆಗಳನ್ನು ಸೋಮಣ್ಣ ಅವರು ತೀವ್ರವಾಗಿ ಟೀಕಿಸಿದರು. ಮಲ್ಲಿಕಾರ್ಜುನ ಖರ್ಗೆ ಹಿರಿಯ ನಾಯಕರು. ಸಾರ್ವಜನಿಕ ವೇದಿಕೆಯಲ್ಲಿ ಗೌರವ ಕಾಪಾಡಬೇಕು. ಪ್ರಧಾನಮಂತ್ರಿಗಳ ವಿರುದ್ಧ ಅವಹೇಳನಕಾರಿ ಭಾಷೆ ಬಳಕೆ ಸರಿಯಲ್ಲ, ಕೂಡಲೇ ತಮ್ಮ ಹೇಳಿಕೆ ಕುರಿತು ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದ್ದಾರೆ. ಮಹಿಳಾ ಮೀಸಲಾತಿ ಮಸೂದೆಗೆ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ವಿರೋಧ ವ್ಯಕ್ತಪಡಿಸುತ್ತಿರುವುದನ್ನೂ ಸೋಮಣ್ಣ ಅವರು ತೀವ್ರವಾಗಿ ಖಂಡಿಸಿದರು. ಈ ಮೂಲಕ ಅವರು ತಮ್ಮ ರಾಜಕೀಯ ಭವಿಷ್ಯಕ್ಕೆ ತಾವೇ ಹಾನಿ ಮಾಡಿಕೊಳ್ಳುತ್ತಿದ್ದಾರೆ. ದೇಶದ ಮಹಿಳೆಯರು ಅವರಿಗೆ ಸೂಕ್ತ ಪಾಠ ಕಲಿಸುವರು ಎಂದು ತಿಳಿಸಿದ್ದಾರೆ.

# ಮಾನ್ವಿ ನಗರದಲ್ಲಿ ಕುಡಿಯುವ ನೀರಿನ ಕಾಮಗಾರಿಗಳಿಗೆ ವೇಗ ಸಚಿವ ಎನ್.ಎಸ್. ಬೋಸರಾಜು ಕಟ್ಟುನಿಟ್ಟಿನ ಎಚ್ಚರಿಕೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ನಗರದಲ್ಲಿ ನಡೆಯುತ್ತಿರುವ ಕುಡಿಯುವ ನೀರಿನ ಯೋಜನೆಗಳ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಿ ಜನರಿಗೆ ಸಮರ್ಪಕ ನೀರಿನ ಸೌಲಭ್ಯ ಒದಗಿಸುವಂತೆ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಪರಿಷತ್ತಿನ ಸಭಾ ನಾಯಕ ಶ್ರೀ ಎನ್. ಎಸ್. ಬೋಸರಾಜು ಜೀ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.**

ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಹಂಪಯ್ಯ ನಾಯಕ ಅವರೊಂದಿಗೆ ನಗರದ ವಾಲ್ಮೀಕಿ ವೃತ್ತದಿಂದ ವಾರ್ಡ್ ಸಂಖ್ಯೆ 26, 27, 25, 20, 19 ಹಾಗೂ 18ರವರೆಗೆ ನಡೆಯುತ್ತಿರುವ ನೂತನ ಕುಡಿಯುವ ನೀರಿನ ಕಾಮಗಾರಿಗಳನ್ನು ಸ್ಥಳಕ್ಕೆ ತೆರಳಿ ಪರಿಶೀಲಿಸಿದರು. ಕಾಮಗಾರಿಗಳು ನಿಧಾನಗತಿಯಲ್ಲಿ ಸಾಗುತ್ತಿರುವ ಕುರಿತು ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಸಚಿವರು,



ಗುತ್ತೇದಾರರು ಹಾಗೂ ಸಂಬಂಧಿಸಿದ ಅಧಿಕಾರಿಗಳು ಹೊಣೆಗಾರಿಕೆಯಿಂದ ಕೆಲಸ ನಿರ್ವಹಿಸಬೇಕು ಎಂದು ಸೂಚಿಸಿದರು.

ಇದಕ್ಕೂ ಮುನ್ನ ಪ್ರವಾಸಿ ಮಂದಿರದಲ್ಲಿ ಅಧಿಕಾರಿಗಳ ಸಭೆ ನಡೆಸಿ ಕಾಮಗಾರಿಗಳ ಪ್ರಗತಿ, ತಾಂತ್ರಿಕ ಅಡಚಣೆಗಳು ಹಾಗೂ ನೀರು ಸರಬರಾಜು ವ್ಯವಸ್ಥೆಯ ಬಗ್ಗೆ ವಿವರವಾದ ಮಾಹಿತಿ ಪಡೆದುಕೊಂಡರು. ಕರ್ನಾಟಕ ಕುಡಿಯುವ ನೀರು ಮತ್ತು ಒಳಚರಂಡಿ ಮಂಡಳಿ ಅಧಿಕಾರಿಗಳಿಗೆ ಸಮಯ ಮಿತಿ ನಿಗದಿ ಮಾಡಿ ಕಾಮಗಾರಿಗಳನ್ನು ವೇಗಗೊಳಿಸುವಂತೆ ನಿರ್ದೇಶನ ನೀಡಿದರು. ಪುರಸಭೆಯ ನೀರು ನಿರ್ವಹಣಾ ಸೂಪರ್ವೈಸರ್ ಕಾರ್ಯವೈಖರಿಯ ಬಗ್ಗೆ ಸಚಿವರು ಅಸಮಾಧಾನ ವ್ಯಕ್ತಪಡಿಸಿ, ಸಾರ್ವಜನಿಕರಿಗೆ ತೊಂದರೆ ಉಂಟಾಗುವಂತ ಕೆಲಸ ಮುಂದುವರಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಶಾಸಕ ಹಂಪಯ್ಯ ನಾಯಕ ಕೂಡ ಅಧಿಕಾರಿಗಳು ಜನರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಬ್ದುಲ್ ಗಫೂರ ಸಾಬ್, ಪಂಚ ಗ್ಯಾರಂಟಿ ಅಧ್ಯಕ್ಷ ಬಿ.ಕೆ. ಅಮರೇಶಪ್ಪ ವಕೀಲರು, ಸೈಯದ್ ಖಾಲಿದ್ ಖಾದ್ರಿ, ರಾಜ ಸುಭಾಷ್ ಚಂದ್ರ ನಾಯಕ್, ಜಿಲಾನಿ ಖುರೇಶಿ, ಹುಸೇನ್ ಬೈಗ್, ರೇವಣಸಿದ್ದಯ್ಯ ಸ್ವಾಮಿ, ಎಚ್.ಬಿ. ಎಂ ಭಾಷಾ, ಅಮ್ಜದ್ ಖಾನ್, ತಾಲೂಕ ದಂಡಾಧಿಕಾರಿ ಭೀಮರಾಯ ರಾಮಸಮುದ್ರ, ಪಿ.ಐ ಸೋಮಶೇಖರ್, ಕೆಂಚರೆಡ್ಡಿ, ಸಿರವಾರ ಠಾಣೆಯ ಸಿಪಿಐ, ಪುರಸಭೆ ಮುಖ್ಯಾಧಿಕಾರಿ ಪರಶುರಾಮ್ ದೇವಮಾನೇ ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳು, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

# ಜಾಲಹಳ್ಳಿಯಿಂದ ವಿವಿಧ ಬಸ್ ಸೇವೆಗಳಿಗಾಗಿ ಮನವಿ ಸಲ್ಲಿಕೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದಿಂದ ವಿವಿಧ ಬಸ್ ಸೇವೆಗಳನ್ನು ಆರಂಭಿಸುವಂತೆ ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ವತಿಯಿಂದ ಇಂದು ದೇವದುರ್ಗ ಸಾರಿಗೆ ಘಟಕದ ವ್ಯವಸ್ಥಾಪಕರಿಗೆ ಮನವಿಪತ್ರ ಸಲ್ಲಿಸಲಾಯಿತು.**

**ಸಾರಿಗೆ ಘಟಕದ ವ್ಯವಸ್ಥಾಪಕ ರಾಮನಗೌಡ ಅವರು ಮನವಿ ಸ್ವೀಕರಿಸಿ, ಎಲ್ಲಾ ಬೇಡಿಕೆಗಳನ್ನು ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದು ಹಾಗೂ ಸಮಸ್ಯೆಗಳನ್ನು ಪರಿಹರಿಸುವ ಪ್ರಯತ್ನ ಮಾಡಲಾಗುವುದು ಎಂದು ಭರವಸೆ ನೀಡಿದರು.**

ವಿದ್ಯಾರ್ಥಿಗಳ ಸಂಕಷ್ಟದ ಬಗ್ಗೆ ಗಮನ ಸೆಳೆದ ಮುಖಂಡರು, ಕರವೇ ಮುಖಂಡ ಶರಣು ಹುಣಸಗಿ ಅವರು ಮಾತನಾಡಿ,
ಜಾಲಹಳ್ಳಿ ಸುತ್ತಮುತ್ತಲಿನ ಗ್ರಾಮಗಳ ವಿದ್ಯಾರ್ಥಿಗಳು ರಾಯಚೂರಿಗೆ ಹೋಗಲು ನೇರ ಬಸ್ ಸೌಲಭ್ಯ ಇಲ್ಲದ ಕಾರಣ ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ ಎಂದು ತಿಳಿಸಿದರು.



ಬೆಳಗ್ಗೆ 6 ಗಂಟೆಗೆ ಜಾಲಹಳ್ಳಿಯಿಂದ ರಾಯಚೂರಿಗೆ ನೇರ ಬಸ್ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು.
ಇದೇ ವೇಳೆ ಶಿವು ಪಾಟೀಲ್ ಗಾಣದಾಳ ಅವರು, ಆಸ್ಪತ್ರೆ ಸೇರಿದಂತೆ ತುರ್ತು ಕೆಲಸಗಳಿಗಾಗಿ ರಾಯಚೂರಿಗೆ ಹೋಗುವ ಗ್ರಾಮಸ್ಥರಿಗೆ ನೇರ ಬಸ್ ಇಲ್ಲದಿರುವುದು ದೊಡ್ಡ ಸಮಸ್ಯೆಯಾಗಿದೆ ಎಂದು ಹೇಳಿದರು.–
ಕಾಲೇಜು ವಿದ್ಯಾರ್ಥಿಗಳಿಗೂ ತೊಂದರೆ ಐಟಿಐ ಮತ್ತು ಡಿಪ್ಲೋಮೋ ವಿದ್ಯಾರ್ಥಿಗಳು ಬೆಳಗ್ಗೆ 9 ಗಂಟೆಗೆ ಕಾಲೇಜು ಹಾಜರಾಗಬೇಕಾದರೂ, ನೇರ ಬಸ್ ಇಲ್ಲದ ಕಾರಣ ಸಮಯಕ್ಕೆ ತಲುಪಲು ಕಷ್ಟವಾಗುತ್ತಿದೆ.
* ಹಲವು ವರ್ಷಗಳಿಂದ ಬೇಡಿಕೆ ಇದ್ದರೂ ಇನ್ನೂ ಬಸ್ ವ್ಯವಸ್ಥೆ ಕಲ್ಪಿಸದಿರುವುದನ್ನು ಮುಖಂಡರು ಖಂಡಿಸಿದರು.

### ಪ್ರಮುಖ ಬೇಡಿಕೆಗಳು

ಕರವೇ ವತಿಯಿಂದ ಈ ಕೆಳಗಿನ ಬೇಡಿಕೆಗಳನ್ನು ಸಲ್ಲಿಸಲಾಯಿತು:
1. ತಿಂತಿಣಿ ಬ್ರಿಜ್‌ನಿಂದ ಜಾಲಹಳ್ಳಿ ಮುಖಾಂತರ ಹೈದರಾಬಾದ್‌ಗೆ ರಾತ್ರಿ ಬಸ್ ಸೇವೆ
2. ದೇವದುರ್ಗ ? ಜಾಲಹಳ್ಳಿ ? ಸುರಪುರ ಮಾರ್ಗವಾಗಿ ಯಾದಗಿರಿ ಬಸ್ ಸೇವೆ
3. ರಾಯಚೂರು ? ಸೊಲ್ಲಾಪುರ ಬಸ್ ಸೇವೆ ಪುನರಾರಂಭ
4. ಜಾಲಹಳ್ಳಿ ಮಾರ್ಗವಾಗಿ ಯಾದಗಿರಿ ? ಬೆಂಗಳೂರು ಬಸ್ ಸೇವೆ ಪುನರಾರಂಭ5. ಬೆಳಗ್ಗೆ 6:00ಕ್ಕೆ ಜಾಲಹಳ್ಳಿಯಿಂದ ರಾಯಚೂರಿಗೆ ನೇರ ಬಸ್
6. ರಾತ್ರಿ 8ಕ್ಕೆ ದೇವದುರ್ಗ ? ಜಾಲಹಳ್ಳಿ ಹುಬ್ಬಳ್ಳಿ ಬಸ್ ವ್ಯವಸ್ಥೆ
7. ಬೆಳಗ್ಗೆ 6ಕ್ಕೆ ದೇವದುರ್ಗ ? ಜಾಲಹಳ್ಳಿ ಗುಲ್ಬರ್ಗ ನೇರ ಬಸ್
8. ಶಾಲೆ/ಕಾಲೇಜು ಸಮಯಕ್ಕೆ ಅನುಗುಣವಾಗಿ ಸ್ಥಳೀಯ ಬಸ್ ವೇಳಾಪಟ್ಟಿ
9. ದೇವದುರ್ಗ ತಿಂತಿಣಿ ಬ್ರಿಡ್ಜ್ ಬಸ್‌ಗಳಿಗೆ ನಿಗದಿತ ಸಮಯ

ಸಾರ್ವಜನಿಕರ ಹಿತದೃಷ್ಟಿಯಿಂದ ಮಹತ್ವ
ಈ ಎಲ್ಲಾ ಬಸ್ ಸೇವೆಗಳು:
* ವಿದ್ಯಾರ್ಥಿಗಳ ಶಿಕ್ಷಣ
* ಆರೋಗ್ಯ ಸೇವೆಗಳಿಗೆ ಪ್ರವೇಶ
* ವ್ಯಾಪಾರ ಮತ್ತು ದೈನಂದಿನ ಪ್ರಯಾಣ

ಇವುಗಳಿಗೆ ಅತ್ಯಂತ ಅಗತ್ಯವಾಗಿದ್ದು, ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಲಾಗಿದೆ.
ಈ ಸಂದರ್ಭದಲ್ಲಿ ನಂದಪ್ಪ ಪಿ ಮಡ್ಡಿ ತಾಲೂಕ ಅಧ್ಯಕ್ಷರು, ಕರವೇ
ಗುರುನಾಥ್ ರೆಡ್ಡಿ ಪ್ರಧಾನ ಕಾರ್ಯದರ್ಶಿಗಳು ಭೀಮಣ್ಣ ನಾಯಕ್ ಸಂಚಾಲಕರು,
ತಮ್ಮಣ್ಣ ಹೇರುಂಡಿ ಅಧ್ಯಕ್ಷರು, ಜಾಲಹಳ್ಳಿ ಹೋಬಳಿ ಘಟಕ, ರಂಗಣ್ಣ ಕೋಲ್ಕಾರ್, ರಾಮನಗೌಡ ಮಾಲಿ ಪಾಟೀಲ್, ಬಾಬಾ ಮೆಡಿಕಲ್ ಶಿವು ಪಾಟೀಲ್ ಗಾಣದಾಳ, ಖುರ್ಷಿದ್ ಪಟೇಲ್ ರಂಗಪ್ಪ ಬಂಡಿ, ಶರಣು ಬಸವ ಹುಣಸಗಿ, ಮಲ್ಲು ತೆಗ್ಗಳ್ಳಿ, ಶಾಂತಪ್ಪ ಬಳೆ ಹಾಗೂ ಹಲವಾರು ಕರವೇ ಪದಾಧಿಕಾರಿಗಳು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.